# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 90 | ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 | ಚಿತ್ರದುರ್ಗ | ದಿನಾಂಕ: 16–10–2023 ಸೋಮವಾರ | ಪುಟ: 4 | ಬೆಲೆ : ರೂ.2–00
Volume - 01 Issue - 90 | Title- Code: KARKAN 28269 | Chitradurga | Date: 16-10-2023 Monday | Page: 4 | Price: Rs. 2-00



ಒಳಪುಟದ ಸುದ್ದಿಗಳು
ಅನುದಾನ ರಹಿತ ಖಾಸಗಿ ವಿದ್ಯಾಸಂಸ್ಥೆಗಳ ಮೇಲೆ ರಾಜ್ಯ ಸರ್ಕಾರದ ವಕ್ರದೃಷ್ಠಿ: ರೂಪ್ಸಾ ಅಧ್ಯಕ್ಷ 2
ಪರಿಸರ, ಜಲ ಸಂರಕ್ಷಣೆಯಲ್ಲಿ ಪಾಳೇಗಾರರ ಕಾರ್ಯ ಅವಿಸ್ಮರಣೀಯ: ಎಸ್.ಸಂದೀಪ್ 3
ನವರಾತ್ರಿಯ ಹಬ್ಬದ ಸಂಭ್ರಮ 4



ಸುದ್ದಿ, ಜಾಹಿರಾತಿಗೆ 9686622252


## ಫಾಸ್ಟ್ ನ್ಯೂಸ್

### ಆನೆ ಬಾಗಿಲು ಸಮೀಪ ಹಿಂದೂ ಘರ್ಜನೆ ಸೇನಾ ಸಂಸ್ಥಾನದಿಂದ ದುರ್ಗಾದೇವಿ ಪ್ರತಿಷ್ಠಾಪನೆ



» ಚಿತ್ರದುರ್ಗ

ಆನೆಬಾಗಿಲು ಸಮೀಪವಿರುವ ಆಂಜೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಹಿಂದೂ ಘರ್ಜನೆ ಸೇನಾ ಸಂಸ್ಥಾನ ವತಿಯಿಂದ ದುರ್ಗಾದೇವಿಯನ್ನು ಭಾನುವಾರ ಪ್ರತಿಷ್ಠಾಪಿಸಿ ಒಂಬತ್ತು ದಿನಗಳ ಕಾಲ ಶ್ರದ್ಧಾಭಕ್ತಿಯಿಂದ ಪೂಜೆ ಸಲ್ಲಿಸಲಾಗುತ್ತದೆ.

ಒಂದು ಕೈಯಲ್ಲಿ ತ್ರಿಶೂಲ ಮತ್ತೊಂದು ಕೈಯಲ್ಲಿ ಬಾಣ ಹಿಡಿದಿರುವ ದುರ್ಗಾದೇವಿಯನ್ನು ಕಂಗೊಳಿಸುವಂತೆ ಬಣ್ಣ ಬಣ್ಣದ ಹೂವು ಹಾರಗಳಿಂದ ಸಿಂಗರಿಸಲಾಗಿದೆ. ಬೆಳಗಿನಿಂದ ಸಂಜೆಯತನಕ ನೂರಾರು ಭಕ್ತರು ಧಾವಿಸಿ ಶ್ರದ್ಧಾಭಕ್ತಿಯನ್ನು ಸಮರ್ಪಿಸಿದರು.

ಹದಿನೈದರಂದು ಸಂಜೆ ಕಲಾಂಜಲಿ ಮೆಲೋಡಿಸ್‌ನವರಿಂದ ವಾದ್ಯಗೋಷ್ಠಿ. 16 ರಂದು ಸಪ್ತಗಿರಿ ಭಜನಾ ಮಂಡಳಿಯಿಂದ ದೇವರ ನಾಮಗಳು. 17 ರಂದು ನೃತ್ಯ ಸ್ಪರ್ಧೆ, 18 ರಂದು ಚಿತ್ರದುರ್ಗ ಸಿಂಗರ್‍ಸ್ ಜೋನ್ ಇವರಿಂದ ವಾದ್ಯಗೋಷ್ಠಿ, 19 ರಂದು ಹರಟೆ ಕಟ್ಟೆ ಚರ್ಚಾ ಕಾರ್ಯಕ್ರಮ. 20 ರಂದು ಶ್ರೀಕಾಂತ್ ಇವರಿಂದ ಅಷ್ಟಲಕ್ಷ್ಮಿ ಪೂಜೆ, 21 ರಂದು ಬೆಳಿಗ್ಗೆ ಸರಸ್ವತಿ ಪೂಜೆ ಹಾಗೂ ಅಕ್ಷರಾಭ್ಯಾಸ, 22 ರಂದು ದುರ್ಗಾಷ್ಟಮಿ ಪ್ರಯುಕ್ತ ಮೈಸೂರಿನ ದಯಾನಂದ ಶರ್ಮ ಇವರಿಂದ ಗಣ ಹೋಮ, ನವಗ್ರಹ ಹೋಮ, ಧ್ವನಂತರಿ ಹೋಮ, ಸುದರ್ಶನ ಹೋಮ, ನರಸಿಂಹ ಹೋಮ, ಲಕ್ಷ್ಮಿನಾರಾಯಣ ಹೋಮ, ಲಲಿತ ಹೋಮ, ದುರ್ಗಾ ಹೋಮ, ನವ ದುರ್ಗಾ ಹೋಮ, ಅನ್ನಸಂತರ್ಪಣೆ.

23 ರಂದು ಆಯುಧ ಪೂಜೆ ಪ್ರಯುಕ್ತ ಗುರುರಾಜ್ ಇವರಿಂದ ಕೊಳಲು ವಾದನ, 24 ರಂದು ಬನ್ನಿ ಮುಡಿಯುವ ಉತ್ಸವ, ಸಂಜೆ ಭಕ್ತಿಗೀತೆಗಳು, 25 ರಂದು ನಗರದ ಪ್ರಮುಖ ಬೀದಿಗಳಲ್ಲಿ ದುರ್ಗಾದೇವಿಯ ಶೋಭಾಯಾತ್ರೆ ನಂತರ ಚಂದ್ರವಳ್ಳಿಯಲ್ಲಿ ವಿಸರ್ಜಿಸಲಾಗುವುದು. ಭಕ್ತಾಧಿಗಳು ಒಂಬತ್ತು ದಿನಗಳ ಕಾಲ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದುರ್ಗಾದೇವಿಯ ಕೃಪೆಗೆ ಪಾತ್ರರಾಗುವಂತೆ ಹಿಂದೂ ಘರ್ಜನೆ ಸೇನಾ ಸಂಸ್ಥಾನ ಅಧ್ಯಕ್ಷ ಸಾಗರ್ ವಿನಂತಿಸಿದ್ದಾರೆ.

# ಸಾಂಸ್ಕೃತಿಕವಾಗಿ ಬಹಳ ಶ್ರೀಮಂತ ನಾಡು ನಮ್ಮದು: ಸಿಎಂ ಸಿದ್ದರಾಮಯ್ಯ ಬಣ್ಣನೆ

### ಬರಗಾಲವಿದ್ದರೂ ನಮ್ಮ ಸಂಪ್ರದಾಯ ಮತ್ತು ವೈಭವಕ್ಕೆ ಕೊರತೆ ಇಲ್ಲದಂತೆ ಅರ್ಥಪೂರ್ಣ ದಸರಾ ಆಚರಿಸಲಾಗುವುದು

» ಮೈಸೂರು

ಬರಗಾಲವಿದ್ದರೂ ನಮ್ಮ ಸಂಪ್ರದಾಯ ಮತ್ತು ವೈಭವಕ್ಕೆ ಕೊರತೆ ಇಲ್ಲದಂತೆ ಅರ್ಥಪೂರ್ಣ ದಸರಾ ಆಚರಿಸಲಾಗುವುದು. ನಮ್ಮ ಪರಂಪರೆ ಮತ್ತು ಹಿರಿಮೆಯನ್ನು ಜಗತ್ತಿಗೆ ಸಾರಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದರು.

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಚಾಮುಂಡಿ ಬೆಟ್ಟದಲ್ಲಿ ತಾಯಿ ಚಾಮುಂಡೇಶ್ವರಿ ದೇವಿಗೆ ಅಗ್ರಪೂಜೆ ಸಲ್ಲಿಸುವ ಮೂಲಕ ಸಾಂಪ್ರದಾಯಿಕವಾಗಿ ಚಾಲನೆ ನೀಡಿ ಮಾತನಾಡಿದರು.

ಕನ್ನಡ ನಾಡಿನ ಸಮೃದ್ಧಿ, ಪ್ರಗತಿ, ಸಂಸ್ಕೃತಿ ಮತ್ತು ವೈಭವವನ್ನು ದಸರಾ ಮೂಲಕ ಜಗತ್ತಿಗೆ ಸಾರುವ ಕೆಲಸವನ್ನು ನಾವು ಮಾಡುತ್ತೇವೆ.


ಸಾಂಸ್ಕೃತಿಕವಾಗಿ ಬಹಳ ಶ್ರೀಮಂತ ನಾಡು ನಮ್ಮದು. ನಮ್ಮ ಜನ ಬಹಳ ಸುಸಂಸ್ಕೃತರು. ಪ್ರೀತಿ ಹಂಚುವವರು. ಎಲ್ಲಾ ಜಾತಿ ಧರ್ಮದವರನ್ನು ಅತ್ಯಂತ ಪ್ರೀತಿಯಿಂದ, ಘನತೆಯಿಂದ ನಡೆಸಿಕೊಳ್ಳುವುದು ನಮ್ಮ ಧರ್ಮ ಮತ್ತು ಕರ್ತವ್ಯ ಎಂದರು.

ರಾಜ್ಯದ 116 ತಾಲ್ಲೂಕುಗಳಲ್ಲಿ ಮಳೆ ಇಲ್ಲದೆ ತೀವ್ರ ಬರಗಾಲದ ಸ್ಥಿತಿ ಇದೆ. ಮಳೆ ಇಲ್ಲದೆ ನಾಡಿನ ರೈತ ಕುಲ , ನಾಡಿನ ಜನತೆ ಕಷ್ಟದಲ್ಲಿದ್ದಾರೆ. ಆದ್ದರಿಂದ ಅದ್ದೂರಿ ಇಲ್ಲದ ವೈಭವಕ್ಕೆ ಕೊರತೆ ಇಲ್ಲದ ಅರ್ಥಪೂರ್ಣ ದಸರಾ ಆಚರಿಸಬೇಕು ಎನ್ನುವುದು ನಮ್ಮ ಉದ್ದೇಶ ಎಂದರು.

ಖ್ಯಾತ ಸಂಗೀತ ನಿರ್ದೇಶಕ ನಾದಬ್ರಹ್ಮ ಹಂಸಲೇಖ ಸಾಂಪ್ರದಾಯಕವಾಗಿ, ಅರ್ಥಪೂರ್ಣವಾಗಿ ಉದ್ಘಾಟಿಸಿದರು.

ಪಲ್ಲಕ್ಕಿಯಲ್ಲಿ ಅಲಂಕೃತ ಗೊಂಡಿದ್ದ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಚಾಮುಂಡಿ ಬೆಟ್ಟದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್ ಸಂಪ್ರದಾಯದಂತೆ ಪೂಜೆ ಸಲ್ಲಿಸಿ ನಾಡಿನಲ್ಲಿ ಉತ್ತಮ ಮಳೆ ಬೆಳೆಯಾಗಲಿ ಎಂದು ಪ್ರಾರ್ಥಿಸಿದರು.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ನೇತೃತ್ವದಲ್ಲಿ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸಿದ್ದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ , ಮೈಸೂರು ಮೇಯರ್ ಶಿವಕುಮಾರ್, ಇಂಧನ ಸಚಿವ ಕೆ.ಜೆ.ಜಾ□□9, ಪಶುಸಂಗೋಪನಾ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಆಹಾರ ನಾಗರೀಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ, ಸಂಸದ ಪ್ರತಾಪ್ ಸಿಂಹ, ಶಾಸಕರುಗಳಾದ ತನ್ವೀರ್ ಸೇಠ್, ಎ.ಆರ್. ಕೃಷ್ಣಮೂರ್ತಿ, ಟಿ.ಎಸ್.ಶ್ರೀವತ್ಸ,ವ ಸದಸ್ಯ ಮರಿತಿಬ್ಬೇಗೌಡ, ಉಪ ಮೇಯರ್ ಡಾ.ಜಿ.ರೂಪ, ಜಿಲ್ಲಾಧಿಕಾರಿ ದಸರಾ ವಿಶೇಷಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಜಿ.ಪಂ. ಸಿಇಓ ಗಾಯತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ನಗರಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಶರೀಫ್ ಸೇರಿ ಹಲವು ಪ್ರಮುಖರು ವೇದಿಕೆಯಲ್ಲಿದ್ದರು.







### ಭಾಷಣದ ಹೈಲೈಟ್ಸ್

- ಮೈಸೂರು ಅರಸರ ಕಾಲ ದಿಂದಲೂ ಅತ್ಯಂತ ವೈಭವ ದಿಂದ ಆಚರಿಸಲ್ಪಡುತ್ತಿರುವ ದಸರಾ ನಾನು ತಂದೆ ಹೆಗಲ ಮೇಲೆ ಕುಳಿತು ನೋಡುತ್ತಿದ್ದೆ
- ರಾಜರ ಕಾಲ ಮುಗಿದು ಪ್ರಜಾರಾಜ್ಯ ಬಂದ ಬಳಿಕ ಸರ್ಕಾರ ನಾಡಹಬ್ಬವಾಗಿ ದಸರಾವನ್ನು ಆಚರಿಸುತ್ತಿದೆ
- ಸರ್ವರಿಗೂ ಸಮಾನ ಅವಕಾಶ ಕಲ್ಪಿಸುವುದೇ ಸಾಮಾಜಿಕ ನ್ಯಾಯ. ಇದು ನಮ್ಮ ಸಂವಿಧಾನದ ಮತ್ತು ನಮ್ಮ ಸರ್ಕಾರದ ಆಶಯ
- ಕೇವಲ ರಾಜಕೀಯ ಸ್ವಾತಂತ್ರ್ಯ ಸಾಲದು. ನಮ್ಮ ಜನರಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಒರಬೇಕು ಎಂದು ಅಂಬೇಡ್ಕರ್ ಹೇಳಿದ್ದರು
- ಸರ್ವ ಜನರ ಆರ್ಥಿಕ ಸ್ವಾತಂತ್ರ್ಯಕ್ಕಾಗಿಯೇ ನಾನು 5 ಗ್ಯಾರಂಟಿ ರೂಪಿಸಿದೆವು
- ಕನ್ನಡ ನಾಡಿನ ಸಮೃದ್ಧಿ, ಪ್ರಗತಿ, ಸಂಸ್ಕೃತಿ ಮತ್ತು ವೈಭವವನ್ನು ದಸರಾ ಮೂಲಕ ಜಗತ್ತಿಗೆ ಸಾರುವ ಕೆಲಸವನ್ನು ನಾವು ಮಾಡುತ್ತೇವೆ
- ಎಲ್ಲಾ ಜಾತಿ ಧರ್ಮದವರನ್ನು ಅತ್ಯಂತ ಪ್ರೀತಿಯಿಂದ, ಘನತೆಯಿಂದ ನಡೆಸಿಕೊಳ್ಳುವುದು ನಮ್ಮ ಧರ್ಮ ಮತ್ತು ಕರ್ತವ್ಯ

## ಸಚಿವ ಜಮೀರ್ ಅಹ್ಮದ್ ಖಾನ್ ಪ್ರವಾಸ ಕಾರ್ಯಕ್ರಮ

» ಚಿತ್ರದುರ್ಗ

ರಾಜ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರಾದ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಅವರು ಅ. 17 ರಂದು ಚಿತ್ರದುರ್ಗ ಜಿಲ್ಲೆಗೆ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಸಚಿವರು ಅಂದು ಬೆಳಿಗ್ಗೆ ಬೆಂಗಳೂರಿನಿಂದ ಹೊರಟು ಬೆ. 10.30 ಗಂಟೆಗೆ ಚಿತ್ರದುರ್ಗ ನಗರಕ್ಕೆ ಆಗಮಿಸುವರು, ಬಳಿಕ ನಗರದಲ್ಲಿನ ಮದಕರಿ ನಾಯಕ ವೃತ್ತದಲ್ಲಿನ ಮದಕರಿ ನಾಯಕ ಪುತ್ಥಳಿಗೆ ಮಾಲರ್ಪಣೆ, ನಂತರ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿರುವ ಡಾ. ಅಂಬೇಡ್ಕರ್ ಪುತ್ಥಳಿಗೆ ಹಾಗೂ ಕನಕದಾಸ ವೃತ್ತದಲ್ಲಿನ ಕನಕದಾಸರ ಪುತ್ಥಳಿಗೆ ಮಾಲಾರ್ಪಣೆ ನೆರವೇರಿಸುವರು. ಬೆ. 11.30 ಗಂಟೆಗೆ ನಗರದ ಬಡಾ ಮಕಾನ್ ಗೆ ಭೇಟಿ ನೀಡಿ, ನಂತರ ಪಕ್ಷದ ಕಚೇರಿಗೆ ಭೇಟಿ ನೀಡುವರು. ಮಧ್ಯಾಹ್ನ 12 ಗಂಟೆಗೆ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಗೆ ನೂತನವಾಗಿ ಅಧ್ಯಕ್ಷರಾಗಿ ನೇಮಕಗೊಂಡಿರುವ ಕೆ. ಅನ್ವರ್ ಬಾಷಾ ಅವರಿಗೆ ನಗರದ ಸಿ.ಜೆ. ಕಲ್ಯಾಣ ಮಂಟಪದಲ್ಲಿ ಆಯೋಜಿಸಿರುವ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಳ್ಳುವರು. ಅಂಜುಮನ್–ಐ–ದಾರುಲ್ ಉದ್ "ಶಾದಿ ಮಹಲ್" ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸುವರು.

## ಪ್ರಮುಖ ಸುದ್ದಿ

# ಮಾಸಾಶನ ಪಡೆಯುವವರು ಎನ್‌ಪಿಸಿಐ ಜೋಡಣೆ ಮಾಡಿಸಿಕೊಳ್ಳಿ: ಡಿಸಿ ದಿವ್ಯಪ್ರಭು

» ಚಿತ್ರದುರ್ಗ

ಸಾಮಾಜಿಕ ಭದ್ರತೆಯ ವಿವಿಧ ಯೋಜನೆಗಳಡಿ ಮಾಸಾಶನ ಪಡೆಯುತ್ತಿರುವ ಫಲಾನುಭವಿಗಳಿಗೆ ಅವರ ಬ್ಯಾಂಕ್ ಅಥವಾ ಅಂಚೆ ಕಚೇರಿಯ ಖಾತೆಗಳಿಗೆ ನೇರವಾಗಿ ಮಾಸಾಶನ ಮೊತ್ತ ಪಾವತಿಯಾಗುವುದರಿಂದ, ಫಲಾನುಭವಿಗಳು ಕೂಡಲೆ ಬ್ಯಾಂಕ್ ಅಥವಾ ಅಂಚೆ ಖಾತೆಗೆ ಆಧಾರ್ ಜೋಡಣೆ ಮಾಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ದಿವ್ಯಪ್ರಭು ಜಿ.ಆರ್.ಜೆ. ಅವರು ಮನವಿ ಮಾಡಿದ್ದಾರೆ.

ಸರ್ಕಾರದಿಂದ ಸಾಮಾಜಿಕ ಭದ್ರತೆಯ ವಿವಿಧ ಯೋಜನೆಗಳಾದ ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ, ಸಂಧ್ಯಾ ಸುರಕ್ಷಾ, ಮನಸ್ವಿನಿ, ಮೈತ್ರಿ ಸೇರಿದಂತೆ ವಿವಿಧ ಯೋಜನೆಯಡಿ ಮಾಸಿಕ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೆ



ಅನುಕೂಲ ಮಾಡಿಕೊಡಲು ಪಿಂಚಣಿ ಮೊತ್ತವನ್ನು ಫಲಾನುಭವಿಯ ಬ್ಯಾಂಕ್ ಅಥವಾ ಅಂಚೆ ಖಾತೆಗಳಿಗೆ ಕಳೆದ ಸೆಪ್ಟಂಬರ್ ತಿಂಗಳಿನಿಂದಲೇ ನೇರ ಹಣ ಸಂದಾಯ (ಡಿಬಿಟಿ) ವ್ಯವಸ್ಥೆ ಮೂಲಕ ಪಾವತಿಸಲು ಸರ್ಕಾರ ತೀರ್ಮಾನಿಸಿರುತ್ತದೆ. ವಿವಿಧ ಯೋಜನೆಗಳ 2,75,965 ಫಲಾನುಭವಿಗಳ ಪೈಕಿ ಜಿಲ್ಲೆಯ 9653 ಫಲಾನುಭವಿಗಳು ಇದುವರೆಗೂ ಎನ್‌ಸಿಪಿಐ ಜೋಡಣೆ ಮಾಡದಿರುವುದು ಕಂಡುಬಂದಿರುತ್ತದೆ. ಇದರಲ್ಲಿ 3123 ಫಲಾನುಭವಿಗಳ ಖಾತೆ ನಿಷ್ಕ್ರಿಯವಾಗಿದ್ದರೆ, 6526 ಫಲಾನುಭವಿಗಳ ಬ್ಯಾಂಕ್ ಖಾತೆಗಳು ಇನ್ನು ಆಧಾರ್ ಜೋಡಣೆ ಆಗಿಲ್ಲ. ಹೀಗಾಗಿ ಎನ್‌ಸಿಪಿಐ ಜೋಡಣೆ ಮಾಡಿಸದಿರುವ ಫಲಾನುಭವಿಗಳ ಖಾತೆಗೆ ಸರ್ಕಾರದಿಂದ ಬರುವ ಮಾಸಿಕ ಪಿಂಚಣಿ ಅತಿ ಶೀಘ್ರದಲ್ಲಿಯೇ ಸ್ಥಗಿತಗೊಳ್ಳಲಿದೆ. ಹೀಗಾಗಿ ಎನ್‌ಪಿಸಿಐ (ನ್ಯಾಷನಲ್ ಪೇಮೆಂಟ್ ಕಾರ್ಪೊರೇಶನ್ ಆಫ್ ಇಂಡಿಯಾ) ಜೋಡಣೆ ಮಾಡಿಸದಿರುವ ಫಲಾನುಭವಿಗಳು ನಿರ್ಲಕ್ಷ್ಯ ತೋರದೆ, ಕೂಡಲೆ ತಾವು ಹೊಂದಿರುವ ಬ್ಯಾಂಕ್ ಖಾತೆ ಅಥವಾ ಅಂಚೆ ಖಾತೆಗಳಿಗೆ ಆಧಾರ್ ಜೋಡಣೆ ಮಾಡಿಸಬೇಕು.

ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನಲ್ಲಿ ಒಟ್ಟು 60419 ಫಲಾನುಭವಿಗಳಿದ್ದು,

ಪುಟ 2




## ಫಾಸ್ಟ್ ನ್ಯೂಸ್

### ಮಾಸಾಶನ ಪಡೆಯುವವರು ಎನ್‌ಪಿಸಿಐ ಜೋಡಣೆ ಮಾಡಿಸಿಕೊಳ್ಳಿ: ದಿವ್ಯಪ್ರಭು

» ಮೊದಲ ಪುಟದಿಂದ

2255 ಫಲಾನುಭವಿಗಳು ಬ್ಯಾಂಕ್ ಅಥವಾ ಅಂಚೆ ಖಾತೆಗೆ ಆಧಾರ್ ಜೋಡಣೆ ಮಾಡುವುದು ಬಾಕಿ ಇದೆ. ಅದೇ ರೀತಿ ಚಿತ್ರದುರ್ಗ ತಾಲ್ಲೂಕಿನಲ್ಲಿ 56719 ಫಲಾನುಭವಿಗಳ ಪೈಕಿ 2744 ಜನ, ಹಿರಿಯೂರು ತಾಲ್ಲೂಕಿನಲ್ಲಿ 44548 ಫಲಾನುಭವಿಗಳ ಪೈಕಿ 1562, ಹೊಳಲ್ಕೆರೆ ತಾಲ್ಲೂಕಿನ 38509 ಫಲಾನುಭವಿಗಳ ಪೈಕಿ 966, ಹೊಸದುರ್ಗ ತಾಲ್ಲೂಕಿನ 54680 ಫಲಾನುಭವಿಗಳ ಪೈಕಿ 1662 ಹಾಗೂ ಮೊಳಕಾಲ್ಮೂರು ತಾಲ್ಲೂಕಿನ 21090 ಫಲಾನುಭವಿಗಳ ಪೈಕಿ 464 ಫಲಾನುಭವಿಗಳು ಬ್ಯಾಂಕ್ ಅಥವಾ ಅಂಚೆ ಖಾತೆಗಳಿಗೆ ಆಧಾರ್ ಜೋಡಣೆ ಬಾಕಿ ಇರುತ್ತದೆ. ಫಲಾನುಭವಿಗಳು ಸಂಬಂಧಪಟ್ಟ ಗ್ರಾಮ ಲೆಕ್ಕಾಧಿಕಾರಿಗಳನ್ನು ಸಂಪರ್ಕಿಸಿ, ಎನ್‌ಪಿಸಿಐ ಮ್ಯಾಪಿಂಗ್ ಬಾಕಿ ಇರುವುದನ್ನು ಖಚಿತಪಡಿಸಿಕೊಂಡು, ಒಂದು ವೇಳೆ ಮ್ಯಾಪಿಂಗ್ ಕಾರ್ಯ ಬಾಕಿ ಇದ್ದಲ್ಲಿ, ನೇರವಾಗಿ ಫಲಾನುಭವಿಗಳೇ ತಮ್ಮ ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ಅಥವಾ ಅಂಚೆ ಖಾತೆ ಪುಸ್ತಕದೊಂದಿಗೆ ಸಂಬಂಧಪಟ್ಟ ಬ್ಯಾಂಕ್ ಅಥವಾ ಅಂಚೆ ಕಚೇರಿಗೆ ನೀಡಿ ಎನ್‌ಪಿಸಿಐ ಮ್ಯಾಪಿಂಗ್ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ದಿವ್ಯಪ್ರಭು ಅವರು ತಿಳಿಸಿದ್ದಾರೆ.

### 16 ರಂದು ಬಾಲ್ಯ ವಿವಾಹ ಮುಕ್ತ ಕರ್ನಾಟಕ ಬಾಲ್ಯ ವಿವಾಹ ನಿಷೇಧ ಕುರಿತು ಅರಿವು ಕಾರ್ಯಕ್ರಮ

» ದಾವಣಗೆರೆ

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಅ.16 ರಂದು ಬೆಳಗ್ಗೆ 10 ಗಂಟೆಗೆ ನಗರದ ಎ.ವಿ ಕಮಲಮ್ಮ ಮಹಿಳಾ ಕಾಲೇಜಿನಲ್ಲಿ "ಬಾಲ್ಯ ವಿವಾಹ ಮುಕ್ತ ಕರ್ನಾಟಕ" ಬಾಲ್ಯ ವಿವಾಹ ನಿಷೇಧ ಕುರಿತು ಅರಿವು ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರವೀಣ ಕುಮಾರ್ ಕಾರ್ಯಕ್ರಮ ಉದ್ಘಾಟಿಸುವರು. ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಕಮಲಮ್ಮ ಸೊಪ್ಪಿನ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿ ಎಸ್.ಜಿ ಸಲಗರೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿ ಮಹಾವೀರ ಮಾ, ಕರೆಣ್ಣವರ, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕರಿಸಿದ್ದಪ್ಪ, ಹಿರಿಯ ಕಾನೂನು ಅಧಿಕಾರಿ ಕೆ.ಜಿ.ಕಲ್ಪನಾ, ಯುವಜನ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ಜಯಲಕ್ಷ್ಮೀಬಾಯಿ, ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ರಾಮಾನಾಯ್ಕ, ಎ.ವಿ ಕಮಲಮ್ಮ ಕಾಲೇಜಿನ ಐ.ಕ್ಯೂ.ಎ.ಸಿ ಕೋ ಆರ್ಡಿನೇಟರ್ ಹಾಗೂ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶಿವಕುಮಾರ್.ಆರ್.ಆರ್. ಭಾಗವಹಿಸಲಿದ್ದಾರೆ..

### ಪಾಕ್ ವಿರುದ್ಧ ಭಾರತ ಗೆಲ್ಲಲು ವಿಶೇಷ ಪೂಜೆ



» ಚಿತ್ರದುರ್ಗ

ಭಾರತ–ಪಾಕಿಸ್ತಾನದ ನಡುವೆ ಶನಿವಾರ ನಡೆದ ಏಕದಿನ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾರತ ಗೆಲ್ಲಬೇಕೆಂದುಕರುನಾಡವಿಜಯಸೇನೆಯಿಂದರಾಜ ಉತ್ಸವಾಂಬ ಉಚ್ಚಂಗಿಯಲ್ಲಮ್ಮ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಪ್ರಾರ್ಥಿಸಲಾಯಿತು.ವಿಶ್ವದ ಅತಿ ದೊಡ್ಡ ನರೇಂದ್ರಮೋದಿ ಕ್ರೀಡಾಂಗಣದಲ್ಲಿ ಎರಡು ದೇಶಗಳ ನಡುವೆ ನಡೆದ ಕ್ರಿಕೆಟ್ ಕದನದಲ್ಲಿ ಭಾರತ ಗೆದ್ದೆ ಗೆಲ್ಲತ್ತದೆ ಎಂದು ಉಚ್ಚಂಗಿಯಲ್ಲಮ್ಮನಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದ ಕರುನಾಡ ವಿಜಯಸೇನೆ ಕಾರ್ಯಕರ್ತರು. ವಿನ್‌ಇಂಡಿಯಾ ಎನ್ನುವ ಘೋಷಣೆಗಳನ್ನು ಕೂಗಿದರು.ನೂರಾರು ವಿದ್ಯಾರ್ಥಿನಿಯರು ಪ್ರಾರ್ಥನೆಯಲ್ಲಿ ಸೇರಿಕೊಂಡು ಪಾಕ್ ವಿರುದ್ದ ಭಾರತ ಗೆಲ್ಲಲಿ ಎಂದು ಹಾರೈಸಿದರು.ಕರುನಾಡ ವಿಜಯಸೇನೆ ಜಿಲ್ಲಾಧ್ಯಕ್ಷ ಕೆ.ಟಿ.ಶಿವಕುಮಾರ್, ಮಹಿಳಾ ಘಟಕದ ಅಧ್ಯಕ್ಷೆ ವೀಣಗೌರಣ್ಣ, ಉಪಾಧ್ಯಕ್ಷೆ ರತ್ನಮ್ಮ, ಕಾರ್ಯದರ್ಶಿ ಜಗದೀಶ್, ವಿಶ್ವನಾರಾಯಣಮೂರ್ತಿ, ಮಣಿಕಂಠ, ಅಖಿಲೇಶ್, ಮಹಮದ್ ರಫಿ, ಪ್ರದೀಪ್ ಆರ್. ಅವಿನಾಶ್, ಅಭಿಷೇಕ್, ನಾಗರಾಜ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ವಿಶ್ವನಾಯಕನಾಗಿ ಮೋದಿ ಖ್ಯಾತಿ: ಚಕ್ರವರ್ತಿ

» ಚಳ್ಳಕೆರೆ







ರಾಷ್ಟ್ರದ ಹೆಮ್ಮೆಯ ಪ್ರಧಾನಮಂತ್ರಿಯಾಗಿ 9 ವರ್ಷಗಳ ಕಾಲ ಯಶಸ್ವಿ ಆಡಳಿತ ನಡೆಸಿ ರಾಷ್ಟ್ರವನ್ನು ಅಭಿವೃದ್ಧಿ ಪಥದತ್ತ ಕೊಂಡೊಯುವುದಲ್ಲದೆ, ಇಡೀ ವಿಶ್ವವೇ ಭಾರತದತ್ತ ನೋಡುವಂತೆ ಮಾಡಿದ ಮಹಾನ್ ದೇಶ ಪ್ರೇಮಿ ಪ್ರಧಾನಮಂತ್ರಿ ನರೇಂದ್ರಮೋದಿಯವರ ಜನಪರ ಯೋಜನೆಗಳು ಭಾರತೀಯರಿಗೆ ಶ್ರೀರಕ್ಷೆಯಾಗಿವೆ ಎಂದು ರಾಜ್ಯದ ನಮೋ ಬ್ರಿಗೇಡ್ ಸಂಸ್ಥೆಯ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ತಿಳಿಸಿದರು.

ಅವರು, ದಾವಣಗೆರೆ, ಚಿತ್ರದುರ್ಗ ಕಾರ್ಯಕ್ರಮಗಳನ್ನು ಮುಗಿಸಿ ಬೆಂಗಳೂರಿಗೆ ಹೋಗುವ ಮಾರ್ಗದಲ್ಲಿ ತಮ್ಮ ಮೋಟಾರ್ ಬೈಕ್ ಸಹಿತ ರ್‍ಯಾಲಿಯಲ್ಲಿ ಚಳ್ಳಕೆರೆಗೆ ಆಗಮಿಸಿದಾಗ ಇಲ್ಲಿ ಎಚ್‌ಪಿಪಿಸಿ ಕಾಲೇಜು ಮುಂಭಾಗ ಸ್ವಾಗತಕೋರಿ ವಾಲ್ಮೀಕಿ, ಅಂಬೇಡ್ಕರ್ ವೃತ್ತದ ಮೂಲಕ ನೆಹರೂ ವೃತ್ತಕ್ಕೆ ಆಗಮಿಸಿ ನೆರೆದಿದ್ದ ಕಾರ್ಯಕರ್ತರು ಹಾಗೂ ಅಭಿಮಾನಗಳನ್ನು ಉದ್ದೇಶಿಸಿ ಮಾತನಾಡಿದರು.

ಪ್ರಧಾನಮಂತ್ರಿ ನರೇಂದ್ರಮೋದಿಯವರ ಹಲವಾರು ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವ ಕಾರ್ಯವನ್ನು ನಮೋ ಬ್ರಿಗೇಡ್ ಮಾಡುತ್ತಿದೆ. ಈಗಾಗಲೇ ಉತ್ತರ ಪ್ರದೇಶದಿಂದ ಹಿಡಿದು ರಾಜದಾನಿ ಬೆಂಗಳೂರು ತನಕ ಬೈಕ್ ರ್‍ಯಾಲಿಗಳ ಮೂಲಕವೇ ಜನರಿಗೆ ಮೋದಿಯವರ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಈ ಹಿಂದೆ ಭಾರತಕ್ಕೆ ವಿಶ್ವಸಂಸ್ಥೆಯ ಸದಸ್ಯತ್ವವನ್ನೇ ನೀಡಲು ನಿರಾಕರಿಸಿ ಜನರು ಇಂದು ಮೋದಿಯನ್ನು ಕರೆದುಅವರನ್ನುಆಲಂಗಿಸಿಮೋದಿಯವರ ದೂರದೃಷ್ಠಿ ವಿಶ್ವಕ್ಕೆ ಮಾದರಿ ಎಂದು ಹಾರೈಸಿ ಅವರಿಗೆ ವಿಶ್ವಸಂಸ್ಥೆಯಲ್ಲಿ ವಿಶೇಷ ಸ್ಥಾನಮಾನವನ್ನು ನೀಡಲಾಯಿತು. ಕೇವಲ ಸ್ಥಾನಮಾನವಷ್ಟೇಯಲ್ಲಅಮೇರಿಕ,ಬ್ರಿಟನ್, ಕೆನಡಾ, ಚೀನಾ, ಪ್ರಾನ್ಸ್, ಆಸ್ಟ್ರೇಲಿಯಾ, ಜರ್ಮನಿ, ಅರ್ಜೆಂಟೀನಾ ಮುಂತಾದ ದೇಶಗಳು ಭಾಗವಹಿಸಿದ ಜಿ–20ಸಭೆಯಲ್ಲಿ ರಾಷ್ಟ್ರದ ಎಲ್ಲಾ ಪ್ರಧಾನಿಗಳು ಪ್ರಧಾನಮಂತ್ರಿ ನರೇಂದ್ರಮೋದಿಯ ಯೋಜನೆ, ಅನುಷ್ಠಾನ ಹಾಗೂ ಮುಂದಾಲೋಚನೆಗಳ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ನಮೋ ಬ್ರಿಗೇಡ್ ಇಂದು ರಾಜ್ಯಾಧ್ಯಂತ ಯಾವುದೇ ಪಕ್ಷ ಸಂಘಟನೆಯ ಪರವಾಗಿ ಪ್ರಚಾರ ಮಾಡದೆ ಕೇವಲ ನರೇಂದ್ರಮೋದಿಯವರ ಕಾರ್ಯಕ್ರಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯವನ್ನು ನಿರಂತರ ಮಾಡುತ್ತಾ ಬಂದಿದೆ. ಮುಂಬರುವ 2024ರ ಲೋಕಸಭಾ ಚುನಾವಣೆಯಲ್ಲೂ ಸಹ ಮತ್ತೊಮ್ಮೆ ಮೋದಿಯವರ ಆಡಳಿತವನ್ನು ಈದೇಶದ ಕೋಟ್ಯಾಂತರ ಜನ ಬಯಸುತ್ತಾರೆ. ಚುನಾವಣೆಯ ವಿಶ್ಲೇಷಣೆಗಳೂ ಸಹ ಮೋದಿಯವರೇ ಮತ್ತೊಮ್ಮೆ ಪ್ರಧಾನಿಯಾಗುತ್ತಾರೆಂಬುವುದ'ನ್ನು ಒತ್ತಿ ಹೇಳಿವೆ. ರಾಷ್ಟ್ರದಲ್ಲಿ ಮೊಟ್ಟಮೊದಲ ಹ್ಯಾಟ್ರಿಕ್ ಪ್ರಧಾನಮಂತ್ರಿಯಾಗಿ ನರೇಂದ್ರಮೋದಿಯವರು ಅಧಿಕಾರ ಪಡೆಯುವ ದಿನಗಳು ಹತ್ತಿರ ಇವೆ. 9 ವರ್ಷಗಳ ಅವರ ಆಡಳಿತದಲ್ಲಿ ಯಾವುದೇ ಕಪ್ಪುಚುಕ್ಕಿ ಇಲ್ಲ, ನರೇಂದ್ರಮೋದಿಯವರ ಕೇಂದ್ರಸರ್ಕಾರದಲ್ಲಿ ಕಾರ್ಯನಿರ್ವಹಿಸುವ ಪ್ರತಿಯೊಬ್ಬ ಮಂತ್ರಿಯೂಸಹ ಜನಸೇವೆಯಲ್ಲಿ ತೊಡಗಿದ್ದು, ಪಾರದರ್ಶಕ ಆಡಳಿತ ನೀಡುತ್ತಿದ್ದಾರೆ. ಎಲ್ಲಿಯೂ ಸಹ ಲಂಚದ ಆರೋಪವಿಲ್ಲ, ಆದರೆ ಇಂತಹ ಅಪರೂಪದ ಪಾರದರ್ಶಕದ, ಪ್ರಾಮಾಣಿಕತೆಯ, ನಂಬಿಕೆಯ, ವಿಶ್ವಾಸದ, ದೇಶದ ಬಗ್ಗೆ ಚಿಂತನೆಯ ಆಡಳಿತವನ್ನು ಊಹಿಸಿಕೊಳ್ಳುವುದು ಕಷ್ಟ. ಆದರೆ, ಅದು ಭಾರತೀಯರ ಪಾಲಿಗೆ ಇಂದು ನಿಜವಾಗಿದೆ.

ಕಳೆದ 2020ರಲ್ಲಿ ಚಂದ್ರಯಾನ ವಿಫಲವಾದಾಗ ವಿಜ್ಞಾನಿಗಳಿದ್ದ ಕೇಂದ್ರಕ್ಕೆ ಹೋಗಿ ಅವರನ್ನು ಬಾಚಿತಬ್ಬಿ ಅವರಿಗೆ ದೈರ್ಯ ಹೇಳಿ ಕೋಟ್ಯಾಂತರ ರೂಪಾಯಿ ಹಣವನ್ನು ಮತ್ತೆ ಬಿಡುಗಡೆಗೊಳಿಸಿ ಚಂದ್ರಯಾನ–3 ಕಾರ್ಯ ನೆರವೇರಬೇಕು ಎಂದು ಆತ್ಮವಿಶ್ವಾಸ ತುಂಬಿದ ಪ್ರಧಾನಮಂತ್ರಿ ಎಲ್ಲಾ ವಿಜ್ಞಾನಿಗಳಿಗೆ ಮಾದರಿಯಾಗಿದ್ದಾರೆ. ಕಳೆದ ಆ.23ರಂದು ಯಶಸ್ವಿ ಚಂದ್ರಯಾನ ಆದಾಗ ಇಡೀ ವಿಶ್ವವೇ ಭಾರತದ ಸಾಧನೆಗೆ ಬೆರಗಾಯಿತು. ಇದರ ಕೀರ್ತಿ ನರೇಂದ್ರಮೋದಿಯವರಿಗೆ ಸಲ್ಲುತ್ತದೆ ಎಂದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯೆ ಪಾಲಮ್ಮ, ವಿಶ್ವಹಿಂದೂಪರಿಷತ್ ತಾಲ್ಲೂಕು ಅಧ್ಯಕ್ಷ ಡಾ.ಡಿ.ಎನ್.ಮಂಜುನಾಥ, ಕಾರ್ಯದರ್ಶಿ ಕೆ.ಎಂ.ಯತೀಶ್, ಸಂಚಾಲಕರಾದ ಬಾಳೆಮಂಡಿರಾಮದಾಸ್, ಜಯಪಾಲಯ್ಯ, ಟಿ.ಮಂಜುನಾಥ, ಲಕ್ಷ್ಮಿಶ್ರೀವತ್ಸ, ಮಧುಮತಿ, ಇಂಧುಮತಿ, ಉಮೇಶ್, ಮಹಂತೇಶ್, ಹೊಸಮನೆ ಮನೋಜ್, ಭಾಸ್ಕರ್, ಅನಂತರಾಮ್ ಗೌತಮ್ ಉಪಸ್ಥಿತರಿದ್ದರು.

## ಅನುದಾನ ರಹಿತ ಖಾಸಗಿ ವಿದ್ಯಾಸಂಸ್ಥೆಗಳ ಮೇಲೆ ರಾಜ್ಯ ಸರ್ಕಾರದ ವಕ್ರದೃಷ್ಠಿ : ರೂಪ್ಸಾ ಅಧ್ಯಕ್ಷ ಲೋಕೇಶ್‌ತಾಳಿಕಟ್ಟೆ

» ಚಳ್ಳಕೆರೆ



ರಾಜ್ಯದ ಸರ್ವತೋಮುಖ ಅಭಿವೃದ್ಧಿ ಶಿಕ್ಷಣ ಮೇಲೆ ಅವಲಂಬಿತವಾಗಿದೆ. ಶಿಕ್ಷಣಕ್ಕೆ ಒತ್ತುಕೊಡುವ ಸರ್ಕಾರದಿಂದ ಮಾತ್ರ ಉತ್ತಮ ಆಡಳಿತ ನಿರೀಕ್ಷಿಸಬಹುದು. ಎಲ್ಲರೂ ಶಿಕ್ಷಣವಂತರಾದರೆ ಮಾತ್ರ ರಾಜ್ಯವನ್ನು ಅಭಿವೃದ್ಧಿಯತ್ತ ಕೊಂಡೊಯಬಹುದು. ವಿಪರ್ಯಾಸವೆಂದರೆ ಪ್ರಸ್ತುತ ಸರ್ಕಾರದಲ್ಲಿ ಲಕ್ಷಾಂತರ ಶಿಕ್ಷಕರ ಹುದ್ದೆ ಖಾಲಿ ಇದ್ದು ಅವುಗಳನ್ನು ಭರ್ತಿ ಮಾಡದೆ ಶಿಕ್ಷಣದ ಪ್ರಗತಿಯ ಬಗ್ಗೆ ಸರ್ಕಾರ ಚಿಂತನೆ ಮಾಡುವುದು ಒಳ್ಳೆಯ ಲಕ್ಷಣವಲ್ಲವೆಂದು ರೂಪ್ಸಾ ಸಂಘಟನೆಯ ರಾಜ್ಯಾಧ್ಯಕ್ಷ ಲೋಕೇಶ್‌ತಾಳಿಕಟ್ಟೆ ತಿಳಿಸಿದರು.

ಅವರು, ಪ್ರವಾಸಿಮಂದಿರದಲ್ಲಿ ಖಾಸಗಿ ಅನುದಾನ ರಹಿತ ಶಾಲಾ ಆಡಳಿತ ಮಂಡಳಿ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಕಳೆದ ಸೆ.27ರಂದು ರಾಜ್ಯಮಟ್ಟದ ಶೈಕ್ಷಣಿಕ ಕಾರ್ಯಗಾರವನ್ನು ಖಾಸಗಿ ಅನುದಾನ ರಹಿತ ಶಾಲಾ ಮಂಡಳಿ ಯಶಸ್ವಿಯಾಗಿ ಹಮ್ಮಿಕೊಂಡಿದ್ದು, ರೂಪ್ಸಾ ಸಂಘಟನೆಯ ಪರವಾಗಿ ಅವರನ್ನು ಅಭಿನಂದಿಸುವುದಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಅವರು, ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳೂ ಸೇರಿದಂತೆ ಸರ್ಕಾರ ಶಿಕ್ಷಣ ಸಂಸ್ಥೆಗಳೂ ಸಹ ಒಂದೇ ಆದೇಶದಡಿ ಕಾರ್ಯನಿರ್ವಹಿಸಬೇಕಾಗುತ್ತದೆ. ಆದರೂ ಸಹ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಬಗ್ಗೆ ರಾಜ್ಯ ಸರ್ಕಾರ ನಿರ್ಲಕ್ಷ್ಯ ತಾಳಿದೆ. ಯಾವುದೇ ಬೇಡಿಕೆಗಳಿಗೆ ಮನ್ನಣೆ ನೀಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ಖಾಸಗಿ ಅನುದಾನ ರಹಿತ ಶಿಕ್ಷಕರ ಕಲ್ಯಾಣಕ್ಕಾಗಿ ಬರುವ 2024ರಲ್ಲಿ ನಡೆಯುವ ಆಗ್ನೇಯ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಚುನಾವಣೆಗೆ ಸ್ಪರ್ಧಿಸುವ ನಿರ್ಧಾರವನ್ನು ಎಲ್ಲಾ ಶಿಕ್ಷಕರ ಅಭಿಪ್ರಾಯದಂತೆ ಸ್ಪರ್ಧೆಗೆ ಮುಂದಾಗಿರುವುದಾಗಿ ತಿಳಿಸಿದರು. ಶಿಕ್ಷಕ ಬಂಧುಗಳು ತಮ್ಮ ಸಂಸ್ಥೆಗಳ ನಿವಾರಣೆಗಾಗಿ ಶಿಕ್ಷಣ ಕ್ಷೇತ್ರದ ಪ್ರತಿನಿಧಿಯನ್ನೇ ಆಯ್ಕೆ ಮಾಡುವರು ಎಂಬ ವಿಶ್ವಾಸ ನನಗಿದೆ ಎಂದರು.

ಅಧ್ಯಕ್ಷಯಾದಲಗಟ್ಟೆಜಗನ್ನಾಥ,ಕಾರ್ಯದರ್ಶಿ ದಯಾನಂದಪ್ರಹ್ಲಾದ್, ದೊಡ್ಡ ಉಳ್ಳಾರ್ತಿ ಎನ್. ಗೌರೀಶ್, ಮೈಲನಹಳ್ಳಿ ಚಂದ್ರಪ್ಪ, ರಮೇಶ್, ರವಿಕುಮಾರ್, ಸುಭಾಷ್, ಶೇಖ್‌ಪೀರ್ ಮುಂತಾದವರು ಉಪಸ್ಥಿತರಿದ್ದರು.

## ಹೊಸದುರ್ಗ: ಮದಕರಿ ನಾಯಕರ ಜಯಂತಿ ಆಚರಣೆ



» ಹೊಸದುರ್ಗ

ಪಟ್ಟಣದ ಮದಕರಿ ವೃತ್ತದಲ್ಲಿ ಶುಕ್ರವಾರ ತಾಲೂಕು ನಾಯಕ ಸಮಾಜದ ವತಿಯಿಂದ ಗಂಡುಗಲಿ ರಾಜ ವೀರ ಮದಕರಿ ನಾಯಕರ ಜಯಂತಿಯನ್ನು ಆಚರಣೆ ಮಾಡಲಾಯಿತು. ಮದಕರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಪೂಜೆ ಮಾಡಿ, ಪುಷ್ಪಾರ್ಚನೆ ಸಲ್ಲಿಸಲಾಯಿತು.

ತಾಲೂಕು ನಾಯಕ ಸಮಾಜದ ಅಧ್ಯಕ್ಷ ಕೆ.ಟಿ.ರಂಗನಾಥ್ ಮಾತನಾಡಿ, ರಾಜವೀರ ಮದಕರಿ ನಾಯಕರು ತಾಲೂಕಿನ ಜಾನಕಲ್ಲು ಗ್ರಾಮದಲ್ಲಿ ಜನಿಸಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ. ತನ್ನ ಕಿರಿಯ ವಯಸ್ಸಿಗೆ ಚಿತ್ರದುರ್ಗದ ಅರಸನಾಗಿ ಪಟ್ಟಾಭಿಷೇಕ್ತನಾಗಿ ಸಮರ್ಥವಾಗಿ ಆಡಳಿತ ನಡೆಸಿದ್ದಾರೆ. ನಮ್ಮವರೇ ಮಾಡಿದ ಮೋಸದಿಂದಾಗಿ ಮದಕರಿ ನಾಯಕರು ಸಾವಿನ ಬಲೆಗೆ ಸಿಲುಕಿದರು. ದುರ್ಗ ಎಂದರೆ ಮದಕರಿ ಮದಕರಿ ಎಂದರೆ ದುರ್ಗ ಎನ್ನುವಷ್ಟರ ಮಟ್ಟಿಗೆ ಚಿತ್ರದುರ್ಗ ನಾಡಿನಾದ್ಯಂತ ಹೆಸರಾಗಿದೆ. ಈಗಾಗಲೇ, ಪಟ್ಟಣದಲ್ಲಿ ಮದಕರಿ ವೃತ್ತವಿದ್ದು, ಸಮಾಜದ ನಿರ್ಣಯದಂತೆ ಪುತ್ತಳಿಯನ್ನು ನಿರ್ಮಾಣ ಮಾಡಲಾಗುವುದು ಎಂದು ಹೇಳಿದರು.

ಈ ವೇಳೆ ತಾಲೂಕು ನಾಯಕ ಸಮಾಜದ ಉಪಾಧ್ಯಕ್ಷ ತಿಪ್ಪೇಸ್ವಾಮಿ, ಕಾರ್ಯದರ್ಶಿ ವೆಂಗಳಾಪುರ ರಂಗನಾಥ್, ಖಜಾಂಚಿ ಹುಣವಿನಡು ಜಯಣ್ಣ, ಶಿಕ್ಷಕ ಜಯಪ್ರಕಾಶ್, ಮುಖಂಡರಾದ ಗುತ್ತಿಕಟ್ಟೆ ಕೆಂಚಪ್ಪ, ಮಳಲಿ ರುದ್ರಯ್ಯ, ವಿಜಯ್ ಕುಮಾರ್, ರಂಗಾಪುರ ಶೇಖರಪ್ಪ, ಹೊನ್ನೇನಹಳ್ಳಿ ಮಂಜುನಾಥ್ ಮತ್ತು ಚನ್ನಸಮುದ್ರ ಶಶಿಧರ್ ಸೇರಿದಂತೆ ಇತರ ಮುಖಂಡರು ಪಾಲ್ಗೊಂಡಿದ್ದರು.

## ವಕ್ಫ್ ಮಂಡಳಿ ಅಧ್ಯಕ್ಷ ಅನ್ವರ್‌ಭಾಷಾಗೆ ಇಂದು ಸನ್ಮಾನ

» ಚಿತ್ರದುರ್ಗ

ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ನೂತನ ರಾಜ್ಯಾಧ್ಯಕ್ಷರಾಗಿ ನೇಮಕಗೊಂಡಿರುವ ಕೆ.ಅನ್ವರ್‌ಭಾಷಾರವರಿಗೆ ಅ.17 ರಂದು ಚಳ್ಳಕೆರೆ ರಸ್ತೆಯಲ್ಲಿರುವ ಎಸ್.ಜಿ.ಕಲ್ಯಾಣ ಮಂಟಪದಲ್ಲಿ ಬೆಳಿಗ್ಗೆ 10 ಕ್ಕೆ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ವಕ್ಫ್ ಮಂಡಳಿ ಅಧ್ಯಕ್ಷ ಇಕ್ಬಾಲ್ ಹುಸೇನ್(ಎಂ.ಸಿ.ಓ.ಬಾಬು) ತಿಳಿಸಿದರು.ಐಶ್ವರ್ಯ ಫೋರ್ಟ್‌ನಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ನಲವತ್ತು ವರ್ಷಗಳ ಹಿಂದೆ ಸೈಯದ್ ಸೈಫುದ್ದಿನ್ ಕರ್ನಾಟಕರಾಜ್ಯವಕ್ಫ್ ಮಂಡಳಿ ಅಧ್ಯಕ್ಷರಾಗಿದ್ದರು, ಅವರನ್ನು ಬಿಟ್ಟರೆ ಈಗ ಕೆ.ಅನ್ವರ್‌ಭಾಷ ಅಧ್ಯಕ್ಷರಾಗಿರುವುದು ಅಲ್ಪಸಂಖ್ಯಾತರಿಗೆ ರಾಜ್ಯ ಕಾಂಗ್ರೆಸ್ ಸರ್ಕಾರದಿಂದ ಸಾಮಾಜಿಕ ನ್ಯಾಯ ಸಿಕ್ಕಂತಾಗಿದೆ. ಎಂದು ಸಂತಸ ವ್ಯಕ್ತಪಡಿಸಿದರು.

ಸನ್ಮಾನ ಸಮಾರಂಭದ ಅಧ್ಯಕ್ಷತೆಯನ್ನು ಶಾಸಕ ಕೆ.ಸಿ.ವೀರೇಂದ್ರಪಪ್ಪಿ ವಹಿಸಲಿದ್ದಾರೆ.ವಿಶೇಷ ಆಹ್ವಾನಿತರುಗಳಾಗಿ ವಸತಿ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಜಡ್.ಜಮೀರ್ ಅಹಮದ್‌ಖಾನ್, ರಾಜ್ಯಸಭಾ ಸದಸ್ಯ ಡಾ.ಸೈಯದ್‌ನಾಸಿರ್‌ಹುಸೇನ್,ಜಿಲ್ಲಾಉಸ್ತುವಾರಿ ಸಚಿವ ಡಿ.ಸುಧಾಕರ್, ಕೆ.ಪಿ.ಸಿ.ಸಿ. ಕಾರ್ಯಾಧ್ಯಕ್ಷ ಸಲೀಂ ಅಹಮದ್, ಜಿಲ್ಲೆಯ ಎಲ್ಲಾ ಶಾಸಕರು, ಮಾಜಿ ಸಚಿವ ಹೆಚ್.ಆಂಜನೇಯ, ಮಾಜಿ ಸಂಸದ ಬಿ.ಎನ್.ಚಂದ್ರಪ್ಪ, ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ.ತಾಜ್‌ಪೀರ್, ಕೆ.ಪಿ.ಸಿ.ಸಿ.ಸದಸ್ಯ ಎಸ್.ವಿಜಯಕುಮಾರ್, ಮಹಮದ್ ಸಿರಾಜ್ ಇನ್ನು ಅನೇಕರು ಭಾಗವಹಿಸಲಿದ್ದಾರೆ.

**ಪ್ರಮುಖ ಸುದ್ದಿ**

### ಜಾನಪದ ಗಾಯಕ, ವೇದ ಚಿತ್ರದ ಜುಂಜಪ್ಪ ಗೀತೆಯ ಗಾಯಕ ಮೋಹನ್ ಕುಮಾರ್ ಹೇಳಿಕೆ

# ಕಲಾಮನಸುಗಳು ಕಳ್ಳುಬಳ್ಳಿಯಂತೆ ಬೆಳೆಯಲಿ

» ಚಿತ್ರದುರ್ಗ



ಕಲಾಮನಸುಗಳು ಕಳ್ಳುಬಳ್ಳಿಯಂತೆ ಬೆಳೆದು ಸಂಘಟನಾತ್ಮಕವಾಗಿ ತೊಡಗಿಸಿಕೊಳ್ಳಬೇಕೆಂದು ಜಾನಪದ ಗಾಯಕ ಹಾಗು ವೇದ ಚಿತ್ರದ ಜುಂಜಪ್ಪ ಗೀತೆಯ ಗಾಯಕ ಮೋಹನ್ ಕುಮಾರ್ ಹೇಳಿದರು.

ತನುಶ್ರೀ ಪ್ರಕಾಶನಹಾಗು ಸಾಹಿತ್ಯ ಸಾಂಸ್ಕೃತಿಕ ಕಲಾ ವೇದಿಕೆ ವತಿಯಿಂದ ಚಿತ್ರದುರ್ಗದಪತ್ರಿಕಾ ಭವನದಲ್ಲಿ ಆಯೋಜಿಸಿದ್ದ ದ್ವಿತೀಯ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ಮದ್ಯೆ ಸಾಕಷ್ಟು ಜನ ಸಾಧಕರಿದ್ದಾರೆ. ಅವರ ಪ್ರತಿಭಾವಂತಿಕೆ ಪ್ರದರ್ಶನಕ್ಕೆ ಸೂಕ್ತ ವೇದಿಕೆ ಸಿಗದ ಹಿನ್ನಲೆಯಲ್ಲಿ ಅವಕಾಶದಿಂದ ವಂಚಿತರಾಗುತಿದ್ದಾರೆ.ಅಂತಹ ಎಲೆಮರೆ ಕಾಯಿಯಾಗಿ ಬೆಳೆಯುತ್ತಿರುವ ಸಾಹಿತಿಗಳು ಹಾಗು ಕಲಾವಿದರಿಗೆ ಈ ತನುಶ್ರೀ ಪ್ರಕಾಶನವು ವೇದಿಕೆಯಾಗಿ ಹೊರಹೊಮ್ಮಿದೆ.

ಯುವ ಮನಸುಗಳನ್ನು ಸಂಘಟಿಸಿ ಸಾಹಿತ್ಯಾತ್ಮಕವಾಗಿ ಉಜ್ವಲ ಸಮಾಜ ಕಟ್ಟುವ ಕೆಲಸ ಮಾಡುತ್ತಿದೆ.ನಮ್ಮಂತಹ ಯುವ ಸಮೂಹಗಳಲ್ಲಿ ಅಡಗಿರುವ ಕಲಾ,ಕೌಶಲ್ಯಗಳನ್ನು ಗುರುತಿಸುವ ಕೆಲಸವನ್ನು ತನುಶ್ರೀ ಸಾಹಿತ್ಯ,ಸಾಂಸ್ಕೃತಿಕ ಕಲಾ ಸಂಘದ ರಾಜ್ಯಾಧ್ಯಕ್ಷರಾದ ರಾಜು ಅವರು ಮಾಡ್ತಿದ್ದಾರೆ.ಅವರ ಕಾರ್ಯಕ್ಕೆ ನಾವು ಸಹ ಸಾಥ್ ನೀಡ್ತಿದ್ದೇವೆ.ಆಂದ್ರ ಗಡಿಭಾಗದಲ್ಲಿನ ಮೊಳಕಾಲ್ಮೂರು ತಾಲ್ಲೂಕಿನ ಸೂಲೇನಹಳ್ಳಿಯಂತಹ ಪುಟ್ಟ ಗ್ರಾಮದಲ್ಲಿ ಕಲಾ ಸಂಘವನ್ನು ಕಟ್ಟಿದ್ದಾರೆ.

ಈ ವೇದಿಕೆಯು ಗಡಿಭಾಗದಲ್ಲಿ ಕನ್ನಡ ತೇರುಎಳೆಯಲು ಸಹಕಾರಿಯಾಗಿದೆ.ಈ ಸಂಘವು ಇನ್ನಷ್ಟು ಎತ್ತರಕ್ಕೆಬೆಳೆಯಲಿ.ಮತ್ತಷ್ಟು ಸಾಧಕರನ್ನು ಗುರುತಿಸಿ,ಕಲಾವಿದರನ್ನು ಉಳಿಸಿ, ಸಂಘಟಿಸುವ ಶಕ್ತಿಈ ತನುಶ್ರೀ ಕಲಾ ವೇದಿಕೆಗೆ ಬರಲಿ ಎಂದು ಆಶಿಸಿದರು.ಈ ವೇಳೆ ವೇದಿಕೆಯಲ್ಲಿ ಪದ್ಮಣ್ಣ ಗಿಡ್ಡಪ್ಪನವರ್ ರಚಿಸಿದ ಕಾವ್ಯ ವೃಕ್ಷಾಂಗನೆ,ಕಾವ್ಯಂತರಂಗ ಹಾಗು ಬಸವರಾಜ್ ಕರುವಿನ ಬರೆದ ಕಣ್ಣೊಳಗಿನ ಕವಲುಗಳು ಎಂಬ ಕೃತಿಗಳನ್ನು ಮೋಹನ್ ಬಿಡುಗಡೆ ಮಾಡಿದರು.ಆ ಕೃತಿಗಳ ವಿಮರ್ಶೆ ಸಹ ಮಾಡಲಾಯಿತು ಸಮಾವೇಶದಲ್ಲಿ ಮುಖ್ಯ ಅಥಿತಿಗಳಾಗಿ ಮಾತನಾಡಿದ ಅಥಿತಿಗಳಾದ ಮೊರಾರ್ಜಿ ದೇಸಾಯಿ ಶಾಲೆ ಪ್ರಾಂಶುಪಾಲರಾದ ಅನುಸೂಯ ಅವರು,ನಮ್ಮ ಮಕ್ಕಳು ಮೊಬೈಲ್ ಫೀಳಿಗೆ ಬಿದ್ದಿದ್ದಾರೆ. ತಂದೆತಾಯಿಯರನ್ನೆ ಮರೆತು ಮೊಬೈಲ್ ಮೇಲೆ ಅವಲಂಬಿತರಾಗಿದ್ದಾರೆ.ಮನೆಯಲ್ಲಿರುವ ಇಬ್ಬರು ಮಕ್ಕಳು ಪೋಷಕರ ಪ್ರೀತಿಯನ್ನೇ ಮರೆಯುತಿದ್ದಾರೆ.ಹುಟ್ಟಿನಿಂದಲೇ ನಾಡು,ನುಡಿ ಹಾಗು ಸಂಸ್ಕೃತಿಯ ಬಗ್ಗೆ ಕೇಳುವ ಗುಣವಿಲ್ಲ.ಬದಲಾಗಿ ಮೊಬೈಲ್ ನಲ್ಲಿ ಬರುವ ವಿವಿಧ ಮಾರಕ ಆಟಗಳಿಗೆ ಮಕ್ಕಳು ಬಲಿಯಾಗ್ತಿದ್ದಾರೆ.ಹೀಗಾಗಿ ಮನೆಯಲ್ಲಿನ ಮಕ್ಕಳಿಗೆ ಮೊಬೈಲ್ ಫೀಳು ತಪ್ಪಿಸಿ ಸಾಹಿತ್ಯ,ಸಂಸ್ಕೃತಿ ಪರಿಚಯಿಸುವ ಕೆಲಸವನ್ನು ಪೋಷಕರು ಮಾಡಬೇಕು ಎಂದರು. ಸಮಾಜ ಸೇವಕರಾದ ಪುಷ್ಪಚಂದ್ರಶೇಖರ್ ಈ ಕಾರ್ಯಕ್ರಮದ ಸರ್ವಾಧ್ಯಕ್ಷರಾಗಿದ್ದರು.ರಾಜ್ಯಾಧ್ಯಕ್ಷರಾದ ರಾಜು ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.ಕಾರ್ಯಾಧ್ಯಕ್ಷರಾದ ಚಿದಾನಂದಮೂರ್ತಿಯವರು ಆಶಯ ನುಡಿಗಳನ್ನಾಡಿದರು. ಪುಟಾಣಿ ಸನ್ನಿಧಿ ಭರತನಾಟ್ಯ ಪ್ರದರ್ಶಿಸಿದರು. ನೃತ್ಯಪಟು ಚಿನ್ಮಯ್ ನೃತ್ಯ ಪ್ರದರ್ಶಿಸಿದರು. ಈ ವೇಳೆ ವಿವಿಧ ಸಾಧಕರಿಗೆ ಸಾಹಿತ್ಯಸಿರಿ ಸಾಧಕರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ವೇದಿಕೆಯ ಸಂಚಾಲರಾದ ತಿರುಮಲ ನೆರವೇರಿಸಿದರು. ಕಾರ್ಯಕ್ರಮದಲ್ಲಿ ನೇತ್ರವತಿ ನೆಲ್ಲಿಕಟ್ಟೆ,ಸರಸ್ವತಿ ಮತ್ತಿತರರು ಇದ್ದರು

## ಫಾಸ್ಟ್ ನ್ಯೂಸ್

### ಕಾಂಗ್ರೆಸ್‌ಗೆ ನೇಮಕ

» **ಚಿತ್ರದುರ್ಗ**



ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯಾಧ್ಯಕ್ಷ ಎಸ್. ಮಧುಬಂಗಾರಪ್ಪನವರ ಆದೇಶದಂತೆ ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಪ್ರಧಾನ ಕಾರ್ಯದರ್ಶಿಯಾಗಿ ಹೊಸದುರ್ಗ ತಾಲ್ಲೂಕಿನ ಚಿತ್ತಯ್ಯನಹಟ್ಟಿ ಗ್ರಾಮದ ಮೂರ್ತಿ ಎಂ. ಇವರನ್ನು ನೇಮಕ ಮಾಡಲಾಗಿದೆ. ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಜಿಲ್ಲಾಧ್ಯಕ್ಷ ಎನ್.ಡಿ.ಕುಮಾರ್ ಕಾಂಗ್ರೆಸ್ ಕಚೇರಿಯಲ್ಲಿ ಮೂರ್ತಿ ಎಂ.ಇವರಿಗೆ ನೇಮಕ ಪತ್ರ ವಿತರಿಸಿ ಹಿಂದುಳಿದ ವರ್ಗಗಳ ವಿಭಾಗವನ್ನು ಸಂಘಟಿಸಿ ಪಕ್ಷಕ್ಕೆ ಶಕ್ತಿ ತುಂಬುವಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವಂತೆ ಸೂಚಿಸಿದರು.

### ನಗರಂಗೆರೆ ಕೆರೆದಡ ಜಾಲಿಗಿಡಗಳ ಪೊದೆಯಲ್ಲಿ ಜೂಜಾಟ : 11150ರೂ ಹಣ, 12 ಜನರ ವಶ.

» **ಚಳ್ಳಕೆರೆ**

ತಾಲ್ಲೂಕಿನ ನಗರಂಗೆರೆ ಗ್ರಾಮದ ಕೆರೆದಡದಲ್ಲಿನ ಜಾಲಿಗಿಡಗಳ ಪೊದೆಯ ಬಳಿ ಹಾಡುಹಗಲೇ ಜೂಜಾಟವಾಡುತ್ತಿದ್ದ ಸುಮಾರು 12ಕ್ಕೂ ಹೆಚ್ಚು ಜನರನ್ನು ವಶಕ್ಕೆ ಪಡೆದುಕೊಂಡ ಪೊಲೀಸರು ಅವರಿಂದ ಜೂಜಾಟದ ಗಣ 11150ರೂಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಬಗ್ಗೆ ಮಾಹಿತಿ ನೀಡಿದ ಪೊಲೀಸ್ ಇನ್ಸ್‌ಪೆಕ್ಟರ್ ಆರ್.ಎಫ್.ದೇಸಾಯಿ, ಸಾರ್ವಜನಿಕರ ಖಚಿತ ಮಾಹಿತಿ ಮೇರೆಗೆ ಠಾಣಾಧಿಕಾರಿ ಪ್ರವೀಣ್ ಮತ್ತು ವಿಶಾಲ್ ತಂಡ ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಜೂಜಾಟವಾಡುತ್ತಿದ್ದವನ್ನುವಶಕ್ಕೆ ಪಡೆಯಲಾಯಿತು. ಗಾನಪ್ಪನಹಟ್ಟಿ ಸಿರಿಯಣ್ಣ, ಜಯಣ್ಣ, ರಾಜು, ನಗರಂಗೆರೆಯ ನೂರುವುಲ್ಲಾ, ಬಬೀವುಲ್ಲಾ, ನಾಸೀರ್ ಸೇರಿದಂತೆ ಒಟ್ಟು 12 ಜನರನ್ನು ಜೂಜಾಟ ಪ್ರಕರಣದಲ್ಲಿ ವಶಕ್ಕೆ ಪಡೆಯಲಾಗಿದ್ದು, ಅವರ ವಿರುದ್ದ ಪ್ರಕರಣ ದಾಖಲು ಮಾಡಲಾಗಿದೆ.

### ಆಕಸ್ಮಿಕ ಬೆಂಕಿಗೆ ಗುಡಿಸಲು ಆಹುತಿ : ಲಕ್ಷಾಂತರ ರೂ ನಷ್ಟ



» **ಚಳ್ಳಕೆರೆ**

ತಾಲ್ಲೂಕಿನ ಗೋಪನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಡವಿಚಿಕ್ಕೇನಹಳ್ಳಿ ಗ್ರಾಮದಲ್ಲಿ ಮಧ್ಯಾಹ್ನ ಪಲ್ಲವಿ ಕೋಂ ಸ್ವಾಮಿಲಿಂಗಪ್ಪ ಎಂಬುವವರ ವಾಸದಗುಡಿಸಿಲಿಗೆ ಆಕಸ್ಮಿಕ ಬೆಂಕಿ ಬಿದ್ದು ಗುಡಿಸಲಲ್ಲಿದ್ದ ಆಹಾರ ಪದಾರ್ಥ, ಬಟ್ಟೆಬರೆ, ದಿನಸಿ ವಸ್ತುಗಳು ಹಾಗೂ ಹಲವಾರು ದಾಖಲಾತಿಗಳು ಬೆಂಕಿಗೆ ಆಹುತಿಯಾಗಿವೆ. ಗುಡಿಸಿಲಿನಲ್ಲಿ ಅಡುಗೆ ಮಾಡುವ ಸಂದರ್ಭದಲ್ಲಿ ದಿಢೀರ್ ಬೆಂಕಿ ಕಾಣಿಸಿಕೊಂಡಿದೆ. ಕೂಡಲೇ ನೆರೆಹೊರೆಯವರು ದಾವಿಸಿ ಗುಡಿಸಿನಲ್ಲಿದ್ದವರನ್ನು ಹೊರಗೆಳೆದು ಜೀವವನ್ನುರಕ್ಷಿಸಿದ್ದಾರೆ. ಘಟನೆಯಲ್ಲಿ ಯಾವುದೇ ಪ್ರಾಣ ಹಾನಿ ಉಂಟಾಗಿಲ್ಲ. ಸುಮಾರು ಒಂದು ಲಕ್ಷಕ್ಕೂ ಹೆಚ್ಚು ನಷ್ಟ ಸಂಭವಿಸಿದೆ ಎಂದು ಪಲ್ಲವಿಸ್ವಾಮಿಲಿಂಗಪ್ಪ ತಿಳಿಸಿದ್ದಾರೆ. ಈ ಬಗ್ಗೆ ಪೊಲೀಸ್ ಇಲಾಖೆಗೆ ದೂರು ನೀಡುವುದಾಗಿ ತಿಳಿಸಿದ್ದಾರೆ.

### ಮಾರಮ್ಮ ದೇವಸ್ಥಾನ ಕಳ್ಳತನ ವಿಫಲ ಯತ್ನ



» **ಚಳ್ಳಕೆರೆ**

ತಾಲ್ಲೂಕಿನ ಗೋಪನಹಳ್ಳಿ ಗ್ರಾಮದ ಖಾಸಗಿ ಬಸ್ಟಾಂಡ್‌ನಲ್ಲಿರುವ ಯರಬಳ್ಳಿಮಾರಮ್ಮ ದೇವಸ್ಥಾನದಲ್ಲಿಕಳ್ಳತನಪ್ರಕರಣ ವಿಫಲವಾದಘಟನೆ ವರದಿಯಾಗಿದೆ. ಕಳೆದ ಕೆಲವು ವರ್ಷಗಳ ಹಿಂದೆ ಕಳ್ಳರು ದೇವರ ಹುಂಡಿ ಹಣವನ್ನು ಕದ್ದುಕೊಂಡು ಹೋಗಿದ್ದರು. ಅ.14ರ ಶನಿವಾರ ಬೆಳಗಿನ ಜಾವ ಇಬ್ಬರು ಅಪರಿಚಿತ ಕಳ್ಳರು ದೇವಸ್ಥಾನದೊಳಗೆ ಪ್ರವೇಶಿಸಿ ಕಳ್ಳತನಕ್ಕೆ ಯತ್ನಿಸಿದ ಸಂದರ್ಭದಲ್ಲಿ ಪಕ್ಕದಲ್ಲೇ ಮಲಗಿದ್ದ ವ್ಯಕ್ತಿಯೊಬ್ಬರಿಗೆ ಎಚ್ಚರವಾಗಿ ಕೂಗಿಕೊಂಡಿದ್ದಾರೆ. ಕೂಡಲೇ ಎಚ್ಚೆತ್ತುಕೊಂಡ ಕಳ್ಳರು ಕತ್ತಲಲ್ಲಿ ಪರಾರಿಯಾಗಿದ್ದಾರೆ. ಗ್ರಾಮಸ್ಥರು ಯರಬಳ್ಳಿಮಾರಮ್ಮ ದೇವಸ್ಥಾನ ಕಳ್ಳತನ ಪ್ರಕರಣದಿಂದ ಭಯಗೊಂಡಿದ್ದು, ಆರೋಪಿಗಳನ್ನು ಪತ್ತೆಹಚ್ಚುವಂತೆ ಪೊಲೀಸ್ ಇಲಾಖೆಗೆ ಮನವಿ ಮಾಡಿದ್ದಾರೆ.

---

**ಮದಕರಿನಾಯಕ ಜಯಂತಿ ಅಂಗವಾಗಿ ವಿಶೇಷ ಉಪನ್ಯಾಸ, ಪ್ರಬಂಧ ಸ್ಪರ್ಧೆ**

# ಪರಿಸರ, ಜಲ ಸಂರಕ್ಷಣೆಯಲ್ಲಿ ಪಾಳೇಗಾರರ ಕಾರ್ಯ ಅವಿಸ್ಮರಣೀಯ: ಎಸ್.ಸಂದೀಪ್

» **ಚಿತ್ರದುರ್ಗ**



ಕ್ರಿ.ಶ 1549–1779ರಲ್ಲಿನ ಪಾಳೇಗಾರರ ಆಳ್ವಿಕೆಯ ಕಾಲ ಶ್ರೇಷ್ಠ ವಾದುದು, ನಾಯಕರ ಆಳ್ವಿಕೆಯಲ್ಲಿ ಹಲವಾರು ಹೊಂಡ, ಪುಷ್ಕರಣಿಗಳನ್ನು ನಿರ್ಮಿಸಿ ಬಿದ್ದ ಮಳೆ ನೀರಿನ ಹನಿಯೂ ಪೋಲಾಗದಂತೆ ನೀರಿನ ಮರುಪೂರಣಕ್ಕೆ ಆ ಕಾಲದಲ್ಲಿಯೇ ಅಗತ್ಯ ವೈಜ್ಞಾನಿಕ ಕ್ರಮ ಅನುಸರಿಸಿದ್ದು ಇಂದು ನಾವು ಪಾಳೇಗಾರರನ್ನು ಸ್ಮರಿಸಬೇಕು ಎಂದು ಜಿಲ್ಲಾ ಮದಕರಿ ನಾಯಕ ವಿದ್ಯಾ ಸಂಸ್ಥೆ ಅಧ್ಯಕ್ಷರಾದ ಎಸ್.ಸಂದೀಪ್ ಹೇಳಿದರು.

ನಾಡದೊರೆ ರಾಜವೀರ ಮದಕರಿ ನಾಯಕ ಜಯಂತಿ ಅಂಗವಾಗಿ ಋಷಿಸಂಸ್ಕೃತಿ ಗುರುಕುಲ ಮಹಾಸಂಸ್ಥಾನ, ಪರಿಸರ ಮತ್ತು ವನ್ಯಜೀವಿ ಸಂರಕ್ಷಣಾ ವೇದಿಕೆ, ಜೋಗಿಮಟ್ಟಿ ಗೆಳೆಯರ ಬಳಗ ಮತ್ತು ಜಿಲ್ಲಾ ಮದಕರಿ ನಾಯಕ ವಿದ್ಯಾಸಂಸ್ಥೆ ಆಶ್ರಯದಲ್ಲಿ ಅಕ್ಟೋಬರ್ 13 ರಂದು ಜಿಲ್ಲಾ ಮದಕರಿ ನಾಯಕ ವಿದ್ಯಾ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಪರಿಸರ ಮತ್ತು ಜಲ ಸಂರಕ್ಷಣೆಯಲ್ಲಿ ಪಾಳೇಗಾರರ ಪಾತ್ರ ಕುರಿತು ವಿಶೇಷ ಉಪನ್ಯಾಸ ಹಾಗೂ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯ ಚಾಲನಾ ಸಮಾರಂಭ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಜ ದೊರೆಯನ್ನು ಜಾತಿಗೆ ಸೀಮಿತ ಮಾಡದೆ. ಅವರ ಸಾಧನೆ, ಶೌರ್ಯ, ಪರಾಕ್ರಮ, ಯುದ್ದದ ನೀತಿ, ಪರಿಸರ ಕಾಳಜಿ, ಜಲ ಸಂರಕ್ಷಣೆ , ಪ್ರಾಣಿಗಳನ್ನು ಪ್ರೀತಿಮಾಡಿದ್ದನ್ನು ಸ್ಮರಿಸುವ ಹಿನ್ನೆಲೆಯಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಅವರ ಸಾಧನೆ ತಿಳಿಸುವ ಈ ಕಾರ್ಯಕ್ರಮ ಅರ್ಥ ಪೂರ್ಣ. ವಾದುದು. ಮೆರವಣಿಗೆ ಎಷ್ಟು ಮುಖ್ಯ ವೋ ಇಂತಹ ಕಾರ್ಯಕ್ರಮಗಳು ಅತಿಮುಖ್ಯ ಎಂದರು.

ಸಮಾರಂಭದಲ್ಲಿ ಚಿತ್ರದುರ್ಗದ ರಾಜಲಾಂಛನ ಹಿಡಿದು ಉದ್ಘಾಟಿಸಿದ ಚಿತ್ರದುರ್ಗ ರಾಜವಂಶಸ್ಥರಾದ ರಾಜ ಮದಕರಿನಾಯಕ ಅವರು ಮಾತನಾಡಿ, ರಾಜವೀರ ಮದಕರಿ ನಾಯಕ ಜಯಂತಿ ಅಂಗವಾಗಿ ರಾಜವೀರ ಮದಕರಿ ನಾಯಕರು ಕೇವಲ ಜಾತಿಗೆ ಸೀಮಿತವಾದವರಲ್ಲ. ಎಲ್ಲರೂ ಸೇರಿ ಸಂಭ್ರಮದಲ್ಲಿ ಭಾಗವಹಿಸಬೇಕು ಎಂದರು.

ಅಭಿವೃದ್ಧಿ ಹೆಸರಿನಲ್ಲಿ ಅನಿರೀಕ್ಷಿತ ಬೆಳವಣಿಗೆಗಳು ನಡೆದಂತೆ ಹೊಂಡ–ಪುಷ್ಕರಣಿಗಳು ನಿರ್ಲಕ್ಷ್ಯಕ್ಕೆ ತುತ್ತಾಗುತ್ತಿವೆ. ಕಸ, ಕಡ್ಡಿ ಇತರೆ ಘನ ತ್ಯಾಜ್ಯದ ಸಂಗ್ರಹಗಾರ ಪುಷ್ಕರಣಿಗಳು ಮಾರ್ಪಟ್ಟಿದ್ದು ತಮ್ಮ ಅಸ್ತಿತ್ವವನ್ನೇಕಳೆದುಕೊಜಳ್ಳುವಅಂಚಿನಲ್ಲಿವೆ. ಕೆಲವೇ ವರ್ಷಗಳಲ್ಲಿ ಅವು ತಮ್ಮ ಇರುವಿಕೆಯ ಗುರುತನ್ನೇ ಕಳೆದುಕೊಂಡು ಇತಿಹಾಸದ ಪುಟಕ್ಕೆ ಸೇರುವ ಸಾಧ್ಯತೆ ನಿಚ್ಚಳವಾಗಿದೆ. ಪರಿಸರ ಮತ್ತು ವನ್ಯಜೀವಿ ಸಂರಕ್ಷಣಾ ವೇದಿಕೆ ಮತ್ತು ಜೋಗಿಮಟ್ಟಿ ಬಳಗ ಇವುಗಳನ್ನು ಉಳಿಸುವ ಕಾಯಕ ಒಳ್ಳೆಯದು ಎಂದರು.

ಪರಿಸರ ಮತ್ತು ಜಲ ಸಂರಕ್ಷಣೆಯಲ್ಲಿ ಪಾಳೇಗಾರರ ಪಾತ್ರ ಕುರಿತು ಕನ್ನಡ ಸಾಹಿತ್ಯ ಪರಿಷತ್ತು ನಿಕಟಪೂರ್ವ ಜಿಲ್ಲಾ ಗೌರವ ಕಾರ್ಯದರ್ಶಿ ಮಾಲತೇಶ್ ಅರಸ್ ಹರ್ತಿಕೋಟೆ ಅವರು ವಿಶೇಷ ಉಪನ್ಯಾಸಕರಾಗಿ ಮಾತನಾಡಿ, ಪಾಳೇಗಾರರ ಕಾಲದಲ್ಲಿ ಹೊಂಡಗಳು ಪುಷ್ಕರಣಿ ಗಳು ಕಲ್ಯಾಣಿಗಳು ರಚನೆಯಾಗಿವೆ. ಪುಷ್ಕರಣಿ ಅತ್ಯಂತ ಸೊಬಗಿನಿಂದ ಕೂಡಿದ ಪರಿಕಲ್ಪನೆ. ನಮ್ಮ ಪೂರ್ವಜರು ಕಲ್ಯಾಣಿಗಳನ್ನು ನಿರ್ಮಾಣ ಮಾಡಿದ್ದಾರೆ. ಅವು ಪಕ್ಷಿಗಳಿಗೆ, ಮಾನವನ ದೈನಂದಿನ ಬದುಕಿಗೆ ಬೇಕಾಗುವ ಅಗತ್ಯ ಪೂರೈಸುತ್ತವೆ. ನಗರದಲ್ಲಿ ಜೀವಸತ್ವ ತುಂಬಿವೆ ಎಂದರು.

ಬರಪೀಡಿತ ನಾಡಿನಲ್ಲಿ ಜೀವಸೆಲೆ ಕಂಗೊಳಿಸಲು 18ಕ್ಕೂ ಹೆಚ್ಚಿನ ಹೊಂಡ, ಪುಷ್ಕರಣಿಗಳನ್ನು ಪಾಳೇಗಾರರು ನಿರ್ಮಿಸಿದ್ದಾರೆ. ತಂತ್ರಜ್ಞಾನ–ಆಧುನಿಕ ತಂತ್ರಜ್ಞಾನ ಮೇಳೈಸದ ಆ ದಿನಗಳಲ್ಲಿ, ಪಾರಂಪರಿಕ ಪದ್ಧತಿಯಲ್ಲೇ ಅತ್ಯಂತ ಸರಳ, ಸುಂದರ, ವೈಜ್ಞಾನಿಕ ಮಾದರಿಯಲ್ಲಿ ಹೊಂಡಗಳನ್ನು ನಿರ್ಮಿಸಲಾಗಿದೆ ಎಂದರುಪರಿಸರ ಮತ್ತು ವನ್ಯಜೀವಿ ಸಂರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಎಸ್.ಟಿ.ನವೀನ್ ಕುಮಾರ್ ಮಾತನಾಡಿ, ರಾಜ ಮಹಾರಾಜರ ಕಾಲದಿಂದ ಪುಷ್ಕರಣಿಗಳನ್ನು ಉಳಿಸಿಕೊಂಡು ಹೋಗಬೇಕು. ಇಂದು ಬೋರ್ ಕೊರೆಸುವ ತೀವ್ರತೆ ಹೆಚ್ಚಾಗಿ ಅಂತರ್ಜಲ ಕುಸಿತದಿಂದಾಗಿ ನೀರಿಲ್ಲದಂತಾಗಿವೆ. ಆದರೆ ಪುಷ್ಕರಣಿಗಳುಹಾಗಾಗುವುದಿಲ್ಲ.ಅವುಗಳಿಗೆ ಕಾಯಕಲ್ಪ ನೀಡಬೇಕು. ಹೂಳೆತ್ತುವ ಕೆಲಸ ಆಗಬೇಕು. ಕಲ್ಯಾಣಿಗಳಲ್ಲಿ ಬಿದ್ದಿರುವ ಕಸ ತೆಗೆಯುವುದರಿಂದ ಅದರಲ್ಲಿ ನೀರು ಸಂಗ್ರಹಿಸಲು ಸಾಧ್ಯ ಎಂದರು

ಉಪಾಧ್ಯಕ್ಷರಾದ ಜಿ.ಅಂಬಿಕಾ, ಹಿರಿಯ ವಕೀಲರು, ಸಂಘಟನಾ ಕಾರ್ಯದರ್ಶಿ ಡಾ. ಎಂ.ಸಿ. ನರಹರಿ ಮಾತನಾಡಿದರು. ರಾಜ್ಯ ಸಂಚಾಲಕರಾದ ಟಿ.ರುದ್ರಮುನಿ, ಜೋಗಿಮಟ್ಟಿ ಗೆಳೆಯರ ಬಳಗದ ಸಲಹೆಗಾರರಾದ. ಕೆ.ಕ್ಯಾತಣ್ಣ, ಜೋಗಿಮಟ್ಟಿ ಗೆಳೆಯರ ಬಳಗದ ಅಧ್ಯಕ್ಷರಾದ ಎಸ್, ರಾಘವೇಂದ್ರ , ಪ್ರಧಾನ ಕಾರ್ಯದರ್ಶಿ ಮಂಜುನಾಥ್, ಖಜಾಂಚಿ ರವಿಕುಮಾರ್ ಭಾಗವಹಿಸಿದ್ದರು. ಋಷಿಸಂಸ್ಕೃತಿಗುರುಕುಲ ಮಹಾಸಂಸ್ಥಾನ, ಪರಿಸರ ಮತ್ತು ವನ್ಯಜೀವಿ ಸಂರಕ್ಷಣಾ ವೇದಿಕೆ, ಜೋಗಿಮಟ್ಟಿ ಗೆಳೆಯರ ಬಳಗ ಮತ್ತು ಜಿಲ್ಲಾ ಮದಕರಿ ನಾಯಕ ವಿದ್ಯಾಸಂಸ್ಥೆಯ ಸದಸ್ಯರು , ಪದಾಧಿಕಾರಿಗಳು, ವಿವಿಧ ವಿಷಯಗಳ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪ್ರಬಂಧ ಸ್ಪರ್ಧೆಯಲ್ಲಿ ಎಲ್ಲಾ ತಾಲ್ಲೂಕಿನ ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶ ನೀಡಿದ್ದು ಮುಂದಿನ ವಾರ ಫಲಿತಾಂಶ ಪ್ರಕಟ ಮತ್ತು ಬಹುಮಾನ ವಿತರಣೆ ನಡೆಯಲಿದೆ ಎಂದು ಪರಿಸರ ಮತ್ತು ವನ್ಯಜೀವಿ ಸಂರಕ್ಷಣಾ ವೇದಿಕೆ ರಾಜ್ಯ ಸಂಚಾಲಕ ಟಿ.ರುದ್ರಮುನಿ ತಿಳಿಸಿದ್ದಾರೆ.

---

# ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡಕ್ಕೆ ಶಂಕು

## ನಗರದ ನಾನಾ ಕಡೆ ಜಾಗ ಗುರುತಿಸಿ ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕೆ ಕ್ರಮ

» **ದಾವಣಗೆರೆ**



ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಹೆಚ್ಚು ಬೇಡಿಕೆಯಿದ್ದು, ನಗರದ ನಾನಾ ಕಡೆ ಸೂಕ್ತ ಜಾಗ ಗುರುತಿಸಿ ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು ಎಂದು ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್ ಮಲ್ಲಿಕಾರ್ಜುನ್ ತಿಳಿಸಿದರು.

ಶನಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಗರದ ಕುಂದುವಾಡ ರಸ್ತೆಯ ಸಪ್ತಗಿರಿ ಶಾಲೆಯ ಪಕ್ಕದಲ್ಲಿ ಜರುಗಿದ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ನೂತನ ಕಟ್ಟಡಕ್ಕೆ ಭೂಮಿ ಪೂಜೆ ಕಾರ್ಯಕ್ರಮವನ್ನು ನೆರವೇರಿಸಿ ಅವರು ಮಾತನಾಡಿದರು.

ನಗರದಲ್ಲಿ ದೇವರಾಜು ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡವು ರೂ.3.26 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿದ್ದು, ಗುಣಮಟ್ಟದ ಕಾಮಗಾರಿ ಹಾಗೂ ವ್ಯವಸ್ಥಿತ ಕೊಠಡಿಗಳನ್ನು ಹೊಂದಿರಬೇಕು ಹಾಗೂ ನಿಗಧಿತ ಅವಧಿಯಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಂಡು ವಿದ್ಯಾರ್ಥಿನಿಯರ ಅನುಕೂಲಕ್ಕೆ ಲಭ್ಯವಾಗಬೇಕು ಎಂದರು.

ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶದಿಂದ ನಗರಕ್ಕೆ ವಿದ್ಯಾಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು ಅಧಿಕಾರಿಗಳು ಪ್ರತಿಯೊಬ್ಬರಿಗೂ ಹಾಸ್ಟೆಲ್ ವ್ಯವಸ್ಥೆ ಮಾಡಿಕೊಡಬೇಕು ಹಾಗೂ ನೂತನ ಕಟ್ಟಡವನ್ನು ಅತ್ಯಂತ ವ್ಯವಸ್ಥಿತವಾಗಿ ನಿರ್ಮಾಣ ಮಾಡಬೇಕು. ವಿದ್ಯಾರ್ಥಿನಿಯರು ಹಾಸ್ಟೆಲ್ ಸೌಲಭ್ಯದ ಜೊತೆಗೆ ಗುಣಮಟ್ಟದ ಶಿಕ್ಷಣ ಪಡೆದು ಉನ್ನತ ಹುದ್ದೆಗೇರಬೇಕೆಂದರು.

ದಾವಣಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಸರ್ಕಾರಿ ಒಡೆತನದ ಜಾಗ ಕಡಿಮೆ ಇದ್ದು, ಖಾಸಗಿಯಾಗಿ ಖರೀದಿಸಿ, ವಿದ್ಯಾರ್ಥಿ ನಿಲಯವನ್ನು ನಿರ್ಮಾಣ ಮಾಡಲಾಗುವುದು ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಗಾಯಿತ್ರಿ, ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಪುಷ್ಪ ಎಸ್. ಗಡ್ಡಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸುದೀಪ್ ಪಿ. ಬನಾರೆ, ಸಹಾಯಕ ಇಂಜಿನಿಯರ್ ಪ್ರಿಯಾ ಕೆ. ಎ ಉಪಸ್ಥಿತರಿದ್ದರು.

---

# ಮತ್ತಿ ಗ್ರಾಮಕ್ಕೆ ಶಾಸಕರ, ಸಿಇಓ ಭೇಟಿ: ನೀರು ಮಾದರಿ ಪರಿಶಿಲನೆ



» **ದಾವಣಗೆರೆ**

ದಾವಣಗೆರೆ ತಾಲ್ಲೂಕಿನ ಮತ್ತಿ ಗ್ರಾಮದಲ್ಲಿ ಕಲುಷಿತ ಗೊಂಡ ಕುಡಿಯುವ ನೀರಿನ ಪೂರೈಕೆ ವರದಿಗೆ ಸಂಬಂಧಿಸಿದಂತೆ ಅ.15 ರಂದು ಮಾಯಕೊಂಡ ಶಾಸಕರಾದ ಕೆ.ಎಸ್.ಬಸವಂತಪ್ಪ ಮತ್ತು ಸಿಇಓ ಸುರೇಶ್ ಇಟ್ನಾಳ್ ಅವರು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.. ಈ ವೇಳೆ ಕುಡಿಯುವ ನೀರಿನ ಪೈಪ್‌ಲೈನ್ ಪರಿಶೀಲಿಸಿದ ಅವರು ಕುಡಿಯುವ ನೀರಿನ ಪೈಪ್‌ನಿಂದ ಯಾವುದೇ ಕಲುಷಿತ ನೀರು ಪೂರೈಕೆಯಾಗಿರುವುದಿಲ್ಲ. ಕುಡಿಯುವ ನೀರಿನ ಪೈಪ್‌ಲೈನ್‌ಗೆ ಚರಂಡಿ ಪೈಪ್‌ನಿಂದ ಯಾವುದೇ ಕಲುಷಿತ ನೀರು ಪೂರೈಕೆಯಾಗಿರುವುದಿಲ್ಲ. ಚರಂಡಿ ಇರುವುದಕ್ಕಿಂತ ಆಳವಾಗಿರುತ್ತದೆ. ಗ್ರಾಮದಲ್ಲಿ ಕುಡಿಯುವ ನೀರು ಪೂರೈಕೆಗೆ ಜಲಜೀವನ್ ಮಿಷನ್ ಯೋಜನೆಯಡಿ ಕಾಮಗಾರಿ ಕೈಗೊಳ್ಳಲಾಗಿದ್ದು ಈಗಾಲೇ ಶೇ.80ರಷ್ಟು ಮುಕ್ತವಾಗಿರುತ್ತದೆ. ಇದೇ ಜೆ.ಜೆ.ಎಂ ಪೈಪ್‌ಲೈನ್ ಮೂಲಕವೇ ವಾರದಲ್ಲಿ ಕುಡಿಯುವ ನೀರು ಪೂರೈಕೆ ಮಾಡಲು ಸಿಇಒ ಅವರು ಸೂಚನೆ ನೀಡಿದರು.

---

**ಪ್ರಮುಖ ಸುದ್ದಿ**

# ಅಂಬೇಡ್ಕರ್ ಬುದ್ದ ಧಮಕ್ಕೆ ಸೇರ್ಪಡೆಗೊಂಡ ದಿನ ಸ್ಮರಣೆ

» **ಚಿತ್ರದುರ್ಗ**



ದೇವಾಲಯಗಳ ಪ್ರವೇಶಕ್ಕಾಗಿ ಚಳುವಳಿ, ಹೋರಾಟ ಮಾಡುವುದನ್ನು ನಿಲ್ಲಿಸಿ ಶಿಕ್ಷಣವಂತರಾಗಿ ಎಂದು ದಲಿತರು, ಅಸ್ಪೃಶ್ಯರಿಗೆ ಸಂವಿಧಾನಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಹೇಳಿದ್ದರು ಎಂದು ಚಳ್ಳಕೆರೆಯ ಶ್ರೀಮತಿ ಕೋಟೆ ಬೋರಮ್ಮ ಪ್ರಥಮ ದರ್ಜೆ ಕಾಲೇಜು ಅರ್ಥಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಡಾ.ಸಂಜೀವಕುಮಾರ್ ಪೋತೆ ತಿಳಿಸಿದರು.

ಜೈಭೀಮ್ ಕಾರ್ಯಕಾರಿ ಸಮಿತಿ, ನವಯಾನ ಬುದ್ದ ಧಮ್ಮ ಪಥ ವತಿಯಿಂದ ಸ್ಟೇಡಿಯಂ ರಸ್ತೆಯಲ್ಲಿರುವ ಬುದ್ದನ ಪ್ರತಿಮೆ ಬಳಿ ಡಾ.ಬಿ.ಆರ್.ಅಂಬೇಡ್ಕರ್ ಬುದ್ದ ಧಮಕ್ಕೆ ಸೇರ್ಪಡೆಗೊಂಡ ದಿನದ ಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.ಅಸ್ಪೃಶ್ಯತೆ, ಅಸಮಾನತೆ, ಜಾತಿ ಪದ್ದತಿ ನಿವಾರಣೆಯಾಗಬೇಕೆಂದು ಬುದ್ದ, ಅಂಬೇಡ್ಕರ್ ಬಯಸಿದ್ದರು, ಏಸುಕ್ರಿಸ್ತ, ಮಹಮದ್ ಪೈಗಂಬರ್, ಗುರುನಾನಕ್ ಇವರುಗಳು ಕೂಡ ಸಮಾನತೆಯ ಸಂದೇಶ ಸಾರಿದ ಮಹಾತ್ಮರು ಎನ್ನುವುದನ್ನು ಮರೆಯಬಾರದು. ಸರ್ಕಾರದಿಂದ ಸಿಗುವ ಸೌಲಭ್ಯಕ್ಕಾಗಿ ಅಸ್ಪೃಶ್ಯರಾಗುವುದು ತಪ್ಪು, ಆದರೆ ಹುಟ್ಟಿನಿಂದಲೆ ದಲಿತರಾಗಿರುವವರನ್ನು ಜಾತಿ ಸಂಕೋಲೆಯಿಂದ ವಿಮೋಚನೆಗೊಳಿಸುವುದಕ್ಕಾಗಿ ಹೋರಾಡಿದರು. ಬುದ್ದ ಧಮ್ಮ ಪ್ರಜ್ಞೆ, ಸಮಾನತೆ, ಸಹೋದರತ್ವವನ್ನು ಕಲಿಸುತ್ತದೆ. ಬುದ್ದನಲ್ಲಿ ಪಂಚಶೀಲ ತತ್ವ, ಅಷ್ಟಾಂಗ ಮಾರ್ಗಗಳಿದ್ದವು. ಅಭಿವ್ಯಕ್ತಿ ಸ್ವಾತಂತ್ರ್ಯ, ವೈಯಕ್ತಿಕ ಸ್ವಾತಂತ್ರದ ಮಹತ್ವವನ್ನು ಬುದ್ದ ಎತ್ತಿ ತೋರಿಸಿದ್ದರು. ಬುದ್ದ ಎಂದರೆ ಜ್ಞಾನದ ಆಧಾರ. ಅವಲೋಕನೆ, ಚಿಂತನೆ, ಪುನರ್ ಪರಿಶೀಲನೆಗೆ ಒಳಪಡುತ್ತಿದ್ದರು. ಬುದ್ದ ತನ್ನ ವಿರೋಧಿಗಳಿಗೂ ಹಿಂಸೆಯನ್ನು ಬಯಸಲಿಲ್ಲ. ಅಸ್ಪೃಶ್ಯತೆಯನ್ನು ತೊಡೆದು ಹಾಕುವ ಶಕ್ತಿ ಬುದ್ದ ಆಲೋಚನೆಗಳಿಲ್ಲದೆ ಎನ್ನುವುದನ್ನು ಅರ್ಥಮಾಡಿಕೊಂಡಿದ್ದ ಕಾರಣಕ್ಕಾಗಿಯೇ ಡಾ.ಬಿ.ಆರ್. ಅಂಬೇಡ್ಕರ್ ಅ.14 1956 ರಂದು ಹಿಂದೂ ಧರ್ಮವನ್ನು ತೊರೆದು ಭೌದ್ದ ಧರ್ಮಕ್ಕೆ ಸೇರ್ಪಡೆಯಾದರು ಎಂದು ಹೇಳಿದರು.

ಶಿಕ್ಷಕ ಕಸವನಹಳ್ಳಿ ಶಿವಣ್ಣ ಮಾತನಾಡಿ ಅಸ್ಪೃಶ್ಯತೆಯನ್ನು ಆಚರಿಸುವ ವೈದ್ದಿಕ ಹಿಂದೂ ಧರ್ಮದಲ್ಲಿ ಯಾರು ಇರಬಾರದೆನ್ನುವ ಕಾರಣಕ್ಕಾಗಿ ಡಾ.ಬಿ.ಆರ್.ಅಂಬೇಡ್ಕರ್ ಬೌದ್ದ ಧರ್ಮಕ್ಕೆ ಹೋದರು. ಹಿಂದೂ ಧರ್ಮದಲ್ಲಿ ಹುಟ್ಟಿದ್ದೇನೆ. ಆದರೆ ಹಿಂದೂ ಧರ್ಮದಲ್ಲಿ ಸಾಯುವುದಿಲ್ಲ ಎನ್ನುವ ತೀರ್ಮಾನ ತೆಗೆದುಕೊಂಡು ಬುದ್ದ ತತ್ವವನ್ನು ಮೆಚ್ಚಿ ಮಹಾರಾಷ್ಟ್ರದ ನಾಗಪುರದಲ್ಲಿ ಲಕ್ಷಾಂತರ ಅಭಿಮಾನಿಗಳೊಂದಿಗೆ ಬುದ್ದ ಧರ್ಮಕ್ಕೆ ಸೇರ್ಪಡೆಯಾದರು. ಪೂರ್ವಜರು ಬುದ್ದ ಧರ್ಮವನ್ನು ಅನುಸರಿಸುತ್ತಿದ್ದರು. ಬುದ್ದ ಧರ್ಮ ಭಾರತೀಯರ ಮೂಲ ಧರ್ಮ. ಅಂಬೇಡ್ಕರ್ ಹೇಳಿದಂತೆ ಮೊದಲು ದಲಿತರು, ಅಸ್ಪೃಶ್ಯರು ವಿದ್ಯಾವಂತರಾಗಬೇಕಿದೆ ಎಂದು ಮನವಿ ಮಾಡಿದರು.ಸರ್ಕಾರಿ ಕಲಾ ಕಾಲೇಜು ಪ್ರಾಚಾರ್ಯರಾದ ಬಿ.ಟಿ.ತಿಪ್ಪೇಸ್ವಾಮಿ ಮಾತನಾಡಿ ಬುದ್ದನ ತತ್ವ, ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಮಾರ್ಗದಲ್ಲಿ ದಲಿತರು, ಅಸ್ಪೃಶ್ಯರು ಸಾಗಬೇಕಿದೆ ಎಂದು ಕರೆ ನೀಡಿದರು.

ರಾಜ್ಯಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಎಸ್.ನಾಗರಾಜ್ ಮಾತನಾಡುತ್ತ ದೇಶಕ್ಕೆ ಭದ್ರವಾದ ಸಂವಿಧಾನ ಇರದಿದ್ದರೆ ದಲಿತರ ಸ್ಥಿತಿ ಇನ್ನು ಕಷ್ಟವಾಗಿರುತ್ತಿತ್ತು. ಶಿಕ್ಷಣ, ಸಂಘಟನೆ, ಹೋರಾಟದಿಂದ ಮಾತ್ರ ಬದುಕು ಕಟ್ಟಿಕೊಳ್ಳಲು ಸಾಧ್ಯ ಎನ್ನುವುದನ್ನು ಮನಗಂಡಿದ್ದ ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನವನ್ನು ಬರೆಯುವಾಗ ಸಾಕಷ್ಟು ಸಮಸ್ಯೆ ಸವಾಲುಗಳನ್ನು ಎದುರಿಸಿದರು. ಹಾಗಾಗಿ ಎಲ್ಲರೂ ಅಂಬೇಡ್ಕರ್, ಬುದ್ದನ ಮಾರ್ಗ ಅನುಸರಿಸೋಣ ಎಂದರು.

ಲೇಖಕ ಹೆಚ್.ಆನಂದ್‌ಕುಮಾರ್ ಮಾತನಾಡಿ ಡಾ.ಬಿ.ಆರ್.ಅಂಬೇಡ್ಕರ್ ಕೇವಲ ದಲಿತರಿಗಷ್ಟೆ ಸಂವಿಧಾನವನ್ನು ನೀಡಿಲ್ಲ. ಎಲ್ಲಾ ಜಾತಿ ಧರ್ಮದವರಿಗೂ ಸಮಾತನೆಯನ್ನು ಕೊಟ್ಟಂತ ಪುಣ್ಯ ಪುರುಷ. ಆದ್ದರಿಂದ ಅವರೊಬ್ಬ ಜಾತಿಯನ್ನು ಮೀರಿದ ಮಹಾನ್ ನಾಯಕ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ಇಷ್ಟು ವರ್ಷಗಳಾದರೂ ಅಸಮಾನತೆ ಇನ್ನು ಜೀವಂತವಾಗಿದೆ ಎಂದು ವಿಷಾಧಿಸಿದರು. ನಗರಸಭೆ ಮಾಜಿ ಸದಸ್ಯೆ ಶಾಂತಕುಮಾರಿ, ವಾಣಿಶ್ರೀ ಇವರುಗಳು ಮಾತನಾಡಿದರು. ತಮ್ಮಣ್ಣ, ಮುರುಗನ್, ಯಲ್ಲಪ್ಪ, ಮಲ್ಲೇಶಣ್ಣ, ಶ್ರೀನಿವಾಸ್ ಈ ಸಂದರ್ಭದಲ್ಲಿದ್ದರು.

## ಫಾಸ್ಟ್ ನ್ಯೂಸ್

### ಹಿರಿಯ ರಂಗಕರ್ಮಿ ಶಶಿಧರ ಅಡಪ ಅವರಿಗೆ 2023ನೆಯ ಸಾಲಿನ ಶ್ರೀ ಶಿವಕುಮಾರ ಪ್ರಶಸ್ತಿ

» **ಹೊಸದುರ್ಗ**

ತಾಲೂಕಿನ ಸಾಣೇಹಳ್ಳಿಯ ಶ್ರೀ ಶಿವಕುಮಾರ



ಕಲಾಸಂಘ ರಂಗಭೂಮಿಗೆ ಸಲ್ಲಿಸಿದ ಜೀವಮಾನದ ಕೊಡುಗೆಯನ್ನು ಮನ್ನಿಸಿ ಪ್ರತಿವರ್ಷ ಕೊಡಮಾಡುವ ಪ್ರತಿಷ್ಠಿತ 'ಶ್ರೀ ಶಿವಕುಮಾರ ಪ್ರಶಸ್ತಿ'ಗೆ ಈ ಬಾರಿ ಬೆಂಗಳೂರು ಹಿರಿಯ ರಂಗಕರ್ಮಿ ಶಶಿಧರ ಅಡಪ ಅವರನ್ನು ಆಯ್ಕೆ ಮಾಡಿದೆ ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು ತಿಳಿಸಿದ್ದಾರೆ. 2004 ರಿಂದ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳವರ ಹೆಸರಿನಲ್ಲಿ ಶ್ರೀ ಶಿವಕುಮಾರ ಪ್ರಶಸ್ತಿಯನ್ನು ನಮ್ಮ ಕಲಾಸಂಘವು ಕೊಡುತ್ತಾ ಬಂದಿದೆ. ರಂಗಭೂಮಿ, ರಂಗಚಟುವಟಿಕೆಗಳಲ್ಲಿ, ಮಹತ್ವದ ಸಾಧನೆ ಮಾಡಿದ ಹಿರಿಯ ಸಾಧಕರಿಗೆ ಈ ಪ್ರಶಸ್ತಿಯನ್ನು ನೀಡುತ್ತಾ ಬರಲಾಗಿದೆ. ಇದುವರೆಗೂ ಪ್ರಸನ್ನ(2004), ಸಿಜಿಕೆ(2005), ಪಿ ಜಿ ಗಂಗಾಧರಸ್ವಾಮಿ(2006), ಅಶೋಕ ಬಾದರದಿನ್ನಿ(2007), ಮಾಲತಿಶ್ರೀ(2008), 2009ರಲ್ಲಿ ಅತಿವೃಷ್ಠಿ ಕಾರಣ ನೀಡಿಲ್ಲ. ಸಿ ಬಸವಲಿಂಗಯ್ಯ(2010), ಬಿ ಜಯಶ್ರೀ(2011), ಡಾ. ಕೆ ಮರುಳಸಿದ್ಧಪ್ಪ(2012), ಚಿದಂಬರರಾವ್ ಜಂಬೆ(2012), ಕೋಟಗಾನಹಳ್ಳಿ ರಾಮಯ್ಯ(2014), ಡಾ. ಸುಭದ್ರಮ್ಮ ಮನ್ಸೂರು (2015), ಲಕ್ಷ್ಮೀ ಚಂದ್ರಶೇಖರ್ (2016), ಶ್ರೀನಿವಾಸ ಜಿ ಕಪ್ಪಣ್ಣ (2017), ಬಸವರಾಜ ಬೆಂಗೇರಿ(2018), ಟಿ ಎಸ್ ನಾಗಾಭರಣ (2019), 2020ರಲ್ಲಿ ಕರೋನಾ ಕಾರಣದಿಂದ ನೀಡಿಲ್ಲ. ಕೆ ವಿ ನಾಗರಾಜಮೂರ್ತಿ (2021), ಡಾ. ಎಂ ಜಿ ಈಶ್ವರಪ್ಪ(2022) ಇವರಿಗೆ ನೀಡುತ್ತಾ ಬರಲಾಗಿದೆ. ಈ ವರ್ಷ ಈ ಪ್ರಶಸ್ತಿಗೆ ಅರ್ಹರಾದವರು ರಂಗಕರ್ಮಿ, ರಂಗಸಂಘಟಕ, ಕಲಾವಿದ, ಕಲಾನಿರ್ದೇಶಕ ಶಶಿಧರ ಅಡಪ ಅವರು. ಶ್ರೀಯುತರು ತೆರೆಮರೆಯಲ್ಲಿ ಇದ್ದು ಕೆಲಸ ಮಾಡಿದವರು. ನಮ್ಮ ರಂಗಚಟುವಟಿಕೆಗಳಿಗೆ ಕಲಾನಿರ್ದೇಶನ ಮಾಡಿದ್ದಾರೆ. ಶಿವಸಂಚಾರಕ್ಕೆ ಒಡಲಾಳ ಮತ್ತು ವಿನುರ ವೇಮ ಈ ಎರಡು ನಾಟಕಕ್ಕೆ ರಂಗವಿನ್ಯಾಸ ಮಾಡಿದ್ದಾರೆ. ನಮ್ಮ ನಾಟಕೋತ್ಸವದ ವೇದಿಕೆ ವಿನ್ಯಾಸ ಮಾಡಿದಂಥವರು. ಸಿಜಿಕೆ ಹೆಸರಿನಲ್ಲಿ ನಡೆಸುವ ರಂಗೋತ್ಸವ ಮಾಡುವಲ್ಲಿ ಬೆಂಗಳೂರಿನಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಕರ್ನಾಟಕದಲ್ಲಿ ಎಲ್ಲೇ ರಂಗಚಟುವಟಿಕೆ ನಡೆದರೂ ಅದಕ್ಕೆ ಬೆನ್ನೆಲುಬಾಗಿ ತೆರೆಮರೆಯಲ್ಲಿ ಕೆಲಸ ಮಾಡುತ್ತಿದ್ದಾರೆ. 2019ರಲ್ಲಿ ಕರ್ನಾಟಕದ ಎಲ್ಲಾ ಜಿಲ್ಲಾ ಕೇಂದ್ರದಲ್ಲಿ ನಡೆದ 'ಮತ್ತೆ ಕಲ್ಯಾಣ' ಅಭಿಯಾನದಲ್ಲಿ 12ನೆಯ ಶತಮಾನವನ್ನು ನೆನಪು ತರುವಂಥ ಸುಂದರ ಸ್ತಬ್ಧಚಿತ್ರ (ಟ್ಯಾಬ್ಲೋ) ವಿನ್ಯಾಸ ಮಾಡಿ ಮತ್ತೆ ಕಲ್ಯಾಣ ಯಶಸ್ವಿಯಾಗಲಿಕ್ಕೆ ಕಾರಣಕರ್ತರು. ಇದನ್ನು ಇನ್ನಷ್ಟು ವಿಸ್ತರಿಸಿ 2020ರಂದು ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ ಸ್ತಬ್ಧಚಿತ್ರ (ಟ್ಯಾಬ್ಲೋ)ದೊಂದಿಗೆ ನಮ್ಮ ಶ್ರೀ ಶಿವಕುಮಾರ ರಂಗಪ್ರಯೋಗಶಾಲೆಯ ಕಲಾವಿದರು ಭಾಗವಹಿಸಿ ಪ್ರದರ್ಶನ ನೀಡಿದ್ದು ಹೆಚ್ಚು ಮಾನ್ಯತೆ ನೀಡಿತು. ಅವರ ಈ ಎಲ್ಲ ಸಮಗ್ರ ಪ್ರಯತ್ನ, ಪರಿಶ್ರಮಗಳು ರಂಗಭೂಮಿಯ ಉಳಿವಿಗೆ, ಬೆಳವಣಿಗೆಗೆ ಪೂರಕವಾಗಿವೆ. ನಮ್ಮನ್ನೂ ಒಳಗೊಂಡ ಆಯ್ಕೆ ಸಮಿತಿಯು ಇಂಥ ಇನ್ನೂ ಹತ್ತಾರು ಪ್ರತಿಭಾವಂತ ರಂಗಕರ್ಮಿಗಳನ್ನು ಗುರುತಿಸಿತ್ತಾದರೂ ನಾವು ಕೊಡುವ ಪ್ರಶಸ್ತಿ ಒಂದೇ ಆದ್ದರಿಂದ ಅಂತಿಮವಾಗಿ ಶಶಿಧರ ಅಡಪ ಅವರನ್ನು ಆ0ಯ್ಕೆ ಮಾಡಿದೆ. ಇಂತಹ ಅಪರೂಪದ ಅಂತರಾಷ್ಟ್ರೀಯ ಕಲಾವಿದರಿಗೆ 'ಶ್ರೀ ಶಿವಕುಮಾರ ಪ್ರಶಸ್ತಿ' ಪ್ರಕಟ ಆಗಿರುವಂಥದ್ದು ನಮಗಂತೂ ತುಂಬಾ ಸಂತೋಷವಾಯಿತು ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರು ಅವರನ್ನು ಅಭಿನಂದಿಸಿದ್ದಾರೆ. ಪ್ರಶಸ್ತಿಯು 50 ಸಾವಿರ ರೂಪಾಯಿ ನಗದು ಮತ್ತು ಪ್ರಶಸ್ತಿ ಫಲಕಗಳನ್ನು ಒಳಗೊಂಡಿದ್ದು, ಪ್ರಶಸ್ತಿಯನ್ನು ಇದೇ ನವೆಂಬರ್ 2 ರಿಂದ 8 ರವರೆಗೆ ಸಾಣೇಹಳ್ಳಿಯಲ್ಲಿ ನಡೆಯುವ ರಾಷ್ಟ್ರೀಯ ನಾಟಕೋತ್ಸವ'ದ ಸಮಾರೋಪ ಸಮಾರಂಭದ ದಿನ ಪ್ರದಾನ ಮಾಡಲಾಗುವುದು ಎಂದರು.

### ಚಳ್ಳಕೆರೆಯಮ್ಮ ದೇವಸ್ಥಾನದಲ್ಲಿ ನವರಾತ್ರಿ ಉತ್ಸವ : ವಿಶೇಷ ಪೂಜೆ

» **ಚಳ್ಳಕೆರೆ**

ಪ್ರತಿವರ್ಷದಂತೆ ಈ ವರ್ಷವೂ ಗ್ರಾಮ ದೇವತೆ ಚಳ್ಳಕೆರೆಯಮ್ಮ ದೇವಸ್ಥಾನದಲ್ಲಿ ನವರಾತ್ರಿ ಉತ್ಸವ ಅಂಗವಾಗಿ ಅಮ್ಮನವರಿಗೆ ಪ್ರತಿನಿತ್ಯ ಕುಂಕುಮಾರ್ಚನೆ, ಪಂಚಾಮೃತಾಭಿಷೇಕ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಧರ್ಮದರ್ಶಿ ಗೌಡ್ರ ಪಿ.ಜಿ.ರಾಮಣ್ಣ ತಿಳಿಸಿದ್ದಾರೆ. ಅವರು, ಈ ಬಗ್ಗೆ ಮಾಹಿತಿ ನೀಡಿ, ಅ.14ರಿಂದ24ರ ತನಕ ನವರಾತ್ರಿ ಉತ್ಸವವನ್ನು ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಅ.14ರಿಂದ 21ವರ ಶನಿವಾರತನಕಪ್ರತಿನಿತ್ಯಬೆಳಗ್ಗೆಪಂಚಾಮೃತಾಭಿಷೇಕ, ಅ.15ರಿಂದ23ರ ಸೋಮವಾರದ ತನಕ ಪ್ರತಿದಿನ ಸಂಜೆ ಕುಂಕುಮಾರ್ಚನೆ ಕಾರ್ಯಕ್ರಮ ವಿರುತ್ತದೆ.






ದೇಶಾದ್ಯಂತ ಬಹಳ ವಿಜೃಂಭಣೆಯಿಂದ ಆಚರಿಸಲಾಗುವ ನವ ರಾತ್ರಿ ಹಬ್ಬಕ್ಕೆ ಇನ್ನೇನು ಕ್ಷಣಗಣನೆ ಶುರುವಾಗಿದೆ. ಒಂಬತ್ತು ದಿನಗಳ ಕಾಲ ನಡೆಯುವ ಈ ಹಬ್ಬದಲ್ಲಿ ಜಗನ್ಮಾತೆಯ ಒಂಬತ್ತು ಅವತಾರಗಳನ್ನು ಪೂಜಿಸಲಾಗುತ್ತದೆ. ಮೊದಲನೆಯ ದಿನ ಶೈಲಪುತ್ರಿ, ಎರಡನೇ ದಿನ ಬ್ರಹ್ಮಚಾರಿಣಿ, ಮೂರನೇ ದಿನ ಚಂದ್ರಘಂಟಾ, ನಾಲ್ಕನೆಯ ದಿನ ಕೂಷ್ಮಾಂಡ ದೇವಿ, ಐದನೇ ದಿನ ಸ್ಕಂದ ಮಾತಾ, ಆರನೇ ದಿನ ಕಾತ್ಯಾಯಿನಿ, ಏಳನೇ ದಿನ ಕಾಳರಾತ್ರಿ, ಎಂಟನೆಯ ದಿನ ಮಹಾಗೌರಿ, ಒಂಬತ್ತನೆಯ ದಿನ ಸಿದ್ಧಿದಾತ್ರಿ ಹೀಗೆ ಒಂಬತ್ತು ದಿನ ದೇವಿಯ ನವ ಅವತಾರಗಳನ್ನು ಪೂಜಿಸಲಾಗುತ್ತದೆ. ಅದರ ಜೊತೆಗೆ ಈ ಒಂಬತ್ತು ದಿನಗಳಲ್ಲಿ ನವದುರ್ಗೆಯರಿಗೆ ಪ್ರಿಯವಾದ ಬಣ್ಣದ ವಸ್ತ್ರದಿಂದ ಅಲಂಕರಿಸಲಾಗುತ್ತದೆ. ಈ ಒಂಬತ್ತು ಬಣ್ಣಗಳಿಗೂ ಅದರದ್ದೇ ಆದ ವಿಶೇಷತೆಯಿದೆ. ನೀವು ಕೂಡಾ ಈ ನವರಾತ್ರಿಯ ಹಬ್ಬದಂದು ನವದುರ್ಗೆಯರಿಗೆ ಪ್ರಿಯವಾದ ಬಣ್ಣದ ಸೀರೆ ಅಥವಾ ಉಡುಗೆಯನ್ನು ತೊಟ್ಟು ದೇವಿಯನ್ನು ಪೂಜಿಸಬಹುದು. ಹಾಗಾದರೆ ನವರಾತ್ರಿ ಹಬ್ಬದಂದು ಯಾವ ದಿನ ಯಾವ ಬಣ್ಣದ ಸೀರೆ ಧರಿಸಿದರೆ ಶ್ರೇಷ್ಠ ಮತ್ತು ಈ ನವಬಣ್ಣಗಳ ಮಹತ್ವವೇನು ಎಂಬುದನ್ನು ತಿಳಿಯೋಣ.

ನವರಾತ್ರಿ ಹಬ್ಬದಂದು ಯಾವ ದಿನ ಯಾವ ಬಣ್ಣದ ಉಡುಗೆಯನ್ನು ಧರಿಸಿದರೆ ಸೂಕ್ತ? ಆ ಬಣ್ಣಗಳ ಮಹತವವೇನು ಇಲ್ಲಿದೆ ಮಾಹಿತಿ:

ಶರದ್ ನವರಾತ್ರಿಯ 9 ಬಣ್ಣಗಳನ್ನು ಯಾವ ಕ್ರಮದಲ್ಲಿ ಆಚರಿಸಬೇಕು ಎಂಬುದನ್ನು ಇಲ್ಲಿ ನೀಡಲಾಗಿದೆ .

- **ನವರಾತ್ರಿ ದಿನ 1 (15 ಅಕ್ಟೋಬರ್ 2023) - ಕಿತ್ತಳೆ**
- **ನವರಾತ್ರಿ ದಿನ 2 (16 ಅಕ್ಟೋಬರ್ 2023) - ಬಿಳಿ**
- **ನವರಾತ್ರಿ ದಿನ 3 (17 ಅಕ್ಟೋಬರ್ 2023) - ಕೆಂಪು**
- **ನವರಾತ್ರಿ ದಿನ 4 (18 ಅಕ್ಟೋಬರ್ 2023) - ರಾಯಲ್ ಬ್ಲೂ**
- **ನವರಾತ್ರಿ ದಿನ 5 (19 ಅಕ್ಟೋಬರ್ 2023) - ಹಳದಿ**
- **ನವರಾತ್ರಿ ದಿನ 6 (20 ಅಕ್ಟೋಬರ್ 2023) - ಹಸಿರು**
- **ನವರಾತ್ರಿ ದಿನ 7 (21 ಅಕ್ಟೋಬರ್ 2023) - ಬೂದು**
- **ನವರಾತ್ರಿ ದಿನ 8 (22 ಅಕ್ಟೋಬರ್ 2023) - ನೇರಳೆ**
- **ನವರಾತ್ರಿ ದಿನ 9 (23 ಅಕ್ಟೋಬರ್ 2023) - ನವಿಲು ಹಸಿರು**

**ಮೊದಲನೇ ದಿನ, ಕೇಸರಿ ಬಣ್ಣ:** ನವರಾತ್ರಿಯ ಮೊದಲ ದಿನ ಪಾಡ್ಯ. ಈ ದಿನದಂದು ಕಳಶ ಪ್ರತಿಷ್ಠಾಪಿಸಿ ನವರಾತ್ರಿ ಹಬ್ಬಕ್ಕೆ ಚಾಲನೆ ನೀಡಲಾಗುತ್ತದೆ. ಈ ದಿನ ಶೈಲಪುತ್ರಿಯನ್ನು ಪೂಜಿಸಲಾಗುತ್ತದೆ. ದೇವಿ ಶೈಲಪುತ್ರಿಗೆ ಕಿತ್ತಳೆ ಬಣ್ಣವೆಂದರೆ ಪ್ರಿಯವಾದುದು. ಈ ದಿನ ನೀವು ಕಿತ್ತಳೆ ಬಣ್ಣದ ಉಡುಗೆಯನ್ನು ತೊಟ್ಟು ದೇವಿಯನ್ನು ಪೂಜಿಸಬಹುದು. ಈ ಬಣ್ಣದ ಮಹತ್ವವನ್ನು ನೋಡುವುದಾರೆ ಕಿತ್ತಳೆ ಬಣ್ಣವು ಶಕ್ತಿ ಮತ್ತು ಸಂತೋಷದ ಭಾವನೆಯನ್ನು ನೀಡುತ್ತದೆ ಮತ್ತು ಕಿತ್ತಳೆ ಬಣ್ಣವು ಧನಾತ್ಮಕ ಶಕ್ತಿಯನ್ನು ರವಾನಿಸುತ್ತದೆ.

**ಎರಡನೇ ದಿನ, ಬಿಳಿಬಣ್ಣ:** ನವರಾತ್ರಿ ಹಬ್ಬದ ಎರಡನೇ ದಿನದಂದು ಮಾತೆ ಬ್ರಹ್ಮಚಾರಿಣಿಯನ್ನು ಪೂಜಿಸಲಾಗುತ್ತದೆ. ಈ ದಿನ ಬಿಳಿ ಬಣ್ಣದ ಉಡುಗೆಯನ್ನು ತೊಟ್ಟರೆ ಶ್ರೇಷ್ಠ ಎಂದು



ಹೇಳಲಾಗುತ್ತದೆ. ಏಕೆಂದರೆ ಬ್ರಹ್ಮಚಾರಿಣಿ ದೇವಿಗೆ ಬಿಳಿ ಬಣ್ಣವು ಪ್ರಿಯವಾದುದು. ಈ ಬಣ್ಣದ ಮಹತ್ವವನ್ನು ನೋಡುವುದಾದರೆ ಬಿಳಿ ಬಣ್ಣವು ಶುದ್ಧತೆ ಮತ್ತು ಶಾಂತಿಯ ಸಂಕೇತವಾಗಿದೆ. ಅಲ್ಲದೆ ಬಿಳಿ ಬಣ್ಣವು ಆತ್ಮವಿಶ್ವಾಸವನ್ನು ಸಹ ಹೆಚ್ಚಿಸುತ್ತದೆ.

**ಮೂರನೇ ದಿನ, ಕೆಂಪು:** ನವರಾತ್ರಿ ಹಬ್ಬದ ಮೂರನೇ ದಿನದಂದು ಚಂದ್ರಘಂಟಾ ದೇವಿಯನ್ನು ಪೂಜಿಲಾಗುತ್ತದೆ. ಈ ದಿನದಂದು ಕೆಂಪು ಬಣ್ಣವನ್ನು ಧರಿಸಿದರೆ ಶ್ರೇಷ್ಠ ಎಂದು ಹೇಳಲಾಗುತ್ತದೆ. ಕೆಂಪು ಬಣ್ಣವು ಜಗನ್ಮಾತೆಯ ನೆಚ್ಚಿನ ಬಣ್ಣವೆಂದು ಪರಿಗಣಿಸಲಾಗಿದೆ. ಈ ಬಣ್ಣದ ಮಹತ್ವವನ್ನು ನೋಡುವುದಾದರೆ ಕೆಂಪುಬಣ್ಣವು ಶಕ್ತಿ ಮತ್ತು ಪ್ರೀತಿಯ ಸಂಕೇತವಾಗಿದೆ.

**ನಾಲ್ಕನೇ ದಿನ, ಕಡುನೀಲಿ ಬಣ್ಣ:** ನವರಾತ್ರಿಯ ನಾಲ್ಕನೇ ದಿನದಂದು ಜಗನ್ಮಾತೆಯ ಒಂಬತ್ತು ಅವತಾರಗಳಲ್ಲಿ ಒಂದಾದ ಕೂಷ್ಮಾಂಡ ದೇವಿಯನ್ನು ಪೂಜಿಸಲಾಗುತ್ತದೆ. ಕೂಷ್ಮಾಂಡ ದೇವಿಗೆ ಪ್ರಿಯವಾದ ಬಣ್ಣವೆಂದರೆ ಕಡುನೀಲಿ ಬಣ್ಣ. ಈ ದಿನ ಕಡುನೀಲಿ ಬಣ್ಣದ ಬಟ್ಟೆಯನ್ನುಟ್ಟು ದೇವಿಯನ್ನು ಪೂಜಿಸಿದರೆ ಶ್ರೇಷ್ಠ ಎಂದು ಹೇಳಲಾಗುತ್ತದೆ. ಈ ಬಣ್ಣವು ಉತ್ತಮ ಆರೋಗ್ಯ ಮತ್ತು ಸಮೃದ್ಧಿಯನ್ನು ಸೂಚಿಸುತ್ತದೆ.

**ಐದನೇ ದಿನ: ಹಳದಿಬಣ್ಣ:** ಈ ದಿನದಂದು ಸ್ಕಂದ ಮಾತೆಯನ್ನು ಪೂಜಿಸಲಾಗುತ್ತದೆ. ಅಲ್ಲದೆ ಈ ಐದನೇ ದಿನ ದೇವಿಗೆ ಹಳದಿ ಬಣ್ಣದ ಸೀರೆಯನ್ನುಟ್ಟು ಅಲಂಕರಿಸುತ್ತಾರೆ. . ಈ ಬಣ್ಣದ ಮಹತ್ವವನ್ನು ನೋಡುವುದಾದರೆ ಹಳದಿ ಬಣ್ಣವು ಖುಷಿ, ಉತ್ಸಾಹ ಮತ್ತು ಸಕಾರಾತ್ಮಕತೆಯನ್ನು ಸಂಕೇತಿಸುತ್ತದೆ. ಅಲ್ಲದೆ ಹಳದಿ ಬಣ್ಣವು ಶುಭದ ಸಂಕೇತವಾಗಿದೆ. ಹಾಗಾಗಿ ಹಳದಿ ಬಣ್ಣದ ಉಡುಗೆಯನ್ನು ಧರಿಸಿ ದೇವಿಯನ್ನು ಪೂಜಿಸುವುದರಿಂದ ಅದೃಷ್ಟ ಬರುತ್ತದೆ ಎಂಬ ನಂಬಿಕೆಯಿದೆ.

**ಆರನೇ ದಿನ, ಹಸಿರುಬಣ್ಣ:** ನವರಾತ್ರಿಯ ಆರನೇ ದಿನ ಕಾತ್ಯಾಯಿನಿ ದೇವಿಯನ್ನು ಪೂಜಿಸಲಾಗುತ್ತದೆ. ಈ ದಿನ ಹಸಿರು ಬಣ್ಣದ ಉಡುಗೆಯನ್ನು ತೊಟ್ಟರೆ ಶ್ರೇಷ್ಠ ಎಂದು ಹೇಳಲಾಗುತ್ತದೆ. ಈ ಬಣ್ಣದ ಮಹತ್ವವೇನೆಂದರೆ ಹಸಿರು ಬಣ್ಣವು ಹೊಸ ಆರಂಭ ಮತ್ತು ಸಮೃದ್ಧಿ ಮತ್ತು ಏಳಿಗೆಯ ಸಂಕೇತವಾಗಿದೆ.

**ಏಳನೇ ದಿನ ಬೂದುಬಣ್ಣ:** ಈ ದಿನದಂದು ಜಗನ್ಮಾತೆಯ ಒಂಬತ್ತು ಅವತಾರಗಳಲ್ಲಿ ಒಂದಾದ ಕಾಳರಾತ್ರಿಯನ್ನು ಪೂಜಿಸಲಾಗುತ್ತದೆ. ಎಲ್ಲಾ ರೀತಿಯ ನಕಾರಾತ್ಮಕ ಶಕ್ತಿ ಹಾಗೂ ದುಷ್ಟಶಕ್ತಿಗಳನ್ನು ನಾಶಮಾಡಲು ಕಾಳರಾತ್ರಿಯನ್ನು ಪೂಜಿಸಲಾಗುತ್ತದೆ. ಈ ದಿನ ಬೂದು ಬಣ್ಣದ ಉಡುಗೆಯನ್ನುಟ್ಟು ಜಗನ್ಮಾತೆಯನ್ನು ಪೂಜಿಸಿದರೆ ಶ್ರೇಷ್ಠ ಎಂದು ಹೇಳಲಾಗುತ್ತದೆ. ಈ ಬಣ್ಣದ ಮಹತ್ವವೇನೆಂದರೆ ಬೂದು ಬಣ್ಣವು ಭಾವನೆಗಳನ್ನು ಸಮನ್ವಯಗೊಳಿಸುತ್ತದೆ.

**ಎಂಟನೇ ದಿನ ನೇರಳೆ ಬಣ್ಣ:** ನವರಾತ್ರಿಯ ಎಂಟನೇ ದಿನದಂದು ಮಹಾಗೌರಿಯನ್ನು ಪೂಜಿಸಲಾಗುತ್ತದೆ. ಮಹಾಗೌರಿಯನ್ನು ಪೂಜಿಸುವುದರಿಂದ ಜೀವನದಲ್ಲಿ ಎಲ್ಲಾ ದುಃಖಗಳಿಂದ ಪರಿಹಾರ ಸಿಗುತ್ತದೆ ಎಂದು ಹೇಳಲಾಗುತ್ತದೆ. ಮಹಾಗೌರಿಗೆ ಪ್ರಿಯವಾದ ಬಣ್ಣವೆಂದರೆ ನೇರಳೆ ಬಣ್ಣ. ಈ ಬಣ್ಣವು ಶ್ರೀಮಂತಿಕೆ ಮತ್ತು ಸಮೃದ್ಧಿಯನ್ನು ಪ್ರತಿನಿಧಿಸುತ್ತದೆ.


**ಒಂಬತ್ತನೇ ದಿನ ಪಿಕಾಕ್ ಗ್ರೀನ್ ಬಣ್ಣ:** ನವರಾತ್ರಿ ಹಬ್ಬದ ಒಂಬತ್ತನೇ ದಿನದಂದು ಸಿದ್ಧಿದಾತ್ರಿ ದೇವಿಯನ್ನು ಪೂಜಿಸಲಾಗುತ್ತದೆ. ಈ ದಿನ ಪಿಕಾಕ್ ಗ್ರೀನ್ ಬಣ್ಣದ ಉಡುಗೆಯನ್ನು ತೊಟ್ಟು ದೇವಿಯನ್ನು ಪೂಜಿಸಿದರೆ ಒಳ್ಳೆಯದು ಎಂದು ಹೇಳಲಾಗುತ್ತದೆ . ಈ ಬಣ್ಣದ ಮಹತ್ವವನ್ನು ನೋಡುವುದಾದರೆ ಇದು ಸಹಾನುಭೂತಿಯನ್ನು ಪ್ರತಿನಿಧಿಸುತ್ತದೆ.

ನವರಾತ್ರಿ ಉಪವಾಸ ದೇಹ ಮತ್ತು ಮನಸ್ಸನ್ನು ಶುದ್ಧೀಕರಿಸಲು ಉತ್ತಮ ಸಮಯ

ನವರಾತ್ರಿ ಎಂದರೆ ಒಂಬತ್ತು ರಾತ್ರಿಗಳು. ಈ ಅವಧಿಯಲ್ಲಿ ತಾಯಿ ದೇವಿ, ಶಕ್ತಿ ಅಥವಾ ದೇವಿಯ 9 ರೂಪಗಳನ್ನು ಭಾರತದಾದ್ಯಂತ ಪೂಜಿಸಲಾಗುತ್ತದೆ. ಉತ್ತರ ಮತ್ತು ಪಶ್ಚಿಮ ಭಾರತದಲ್ಲಿ ನವರಾತ್ರಿಯ ಸಮಯದಲ್ಲಿ ಅನೇಕ ಜನರು ಉಪವಾಸ ಮಾಡುತ್ತಾರೆ. ನಿಮ್ಮ ಆಧ್ಯಾತ್ಮಿಕ ಅಭ್ಯಾಸದಲ್ಲಿ ಪ್ರಗತಿ ಸಾಧಿಸಲು, ಮಾತೃ ದೇವತೆಯ ಶಕ್ತಿಯನ್ನು ಆವಾಹಿಸಲು ಅಥವಾ ನಿಮ್ಮ ದೇಹ, ಮನಸ್ಸನ್ನು ಶುದ್ಧೀಕರಿಸಲು ಇದು ಉತ್ತಮ ಸಮಯವಾಗಿದೆ.

ನವರಾತ್ರಿ ಉಪವಾಸದ ನಿಯಮಗಳು ಸಮುದಾಯದಿಂದ ಸಮುದಾಯಕ್ಕೆ ಮತ್ತು ಪ್ರದೇಶದಿಂದ ಪ್ರದೇಶಕ್ಕೆ ಸ್ವಲ್ಪ ಬದಲಾಗುತ್ತವೆ. ಇದೇ ರೀತಿಯ ಉಪವಾಸ ನಿಯಮಗಳು ಏಕಾದಶಿ, ಜನ್ಮಾಷ್ಟಮಿ ಮತ್ತು ಮಹಾಶಿವರಾತ್ರಿ ಸಮಯದ ಉಪವಾಸಕ್ಕೂ ಅನ್ವಯಿಸುತ್ತವೆ.

**ನವರಾತ್ರಿ ವ್ರತದಲ್ಲಿ ಈ ಆಹಾರ ಸೇವಿಸಿ:** ಹಸಿರು ತರಕಾರಿಗಳು, ಸಬ್ಬಕ್ಕಿ, ಒಣ ಹಣ್ಣುಗಳು, ಗೋಧಿ ಹಿಟ್ಟು ಹೀಗೆ ಹಲವು ಪದಾರ್ಥಗಳನ್ನು ಬಳಸಿ ಮಾಡಿದ ಆಹಾರಗಳನ್ನು ಸೇವಿಸಬಹುದು. ಜೀರಿಗೆ, ಕರಿಮೆಣಸಿನ ಪುಡಿ, ಕಲ್ಲುಪ್ಪು, ಏಲಕ್ಕಿ, ಒಣ ದಾಳಿಂಬೆ ಬೀಜ, ಶುಂಠಿ, ಹಸಿರು ಮೆಣಸಿನಕಾಯಿ, ನಿಂಬೆ, ಅ ನ್, ಕೊತ್ತಂಬರಿ, ಪುದಿ ೀನಾ, ಕರಿಬೇವಿನ ಸೊಪ್ಪು, ಒಣ ಮಾವಿನಪುಡಿ, ಕಪ್ಪು ಉಪ್ಪು ಹೀಗೆ ಕೆಲ ಮಸಾಲೆ ಪದಾರ್ಥಗಳು ಹಾಗೂ ಗಿಡಮೂಲಿಕೆಗಳನ್ನು ವ್ರತದ ಸಮಯದ ಆಹಾರದಲ್ಲಿ ಸೇವಿಸಬಹುದು.



ಆಲೂಗಡ್ಡೆ, ಕುಂಬಳಕಾಯಿ, ಸಿಹಿ ಗೆಣಸು, ಬಾಳೆ ಹಣ್ಣು, ಪಪ್ಪಾಯಿ, ಟೊಮೆಟೋ, ಪಾಲಕ್, ಸೋರೆಕಾಯಿ, ಸೌತೆಕಾಯಿ, ಕ್ಯಾರೆಟ್ ನವರಾತ್ರಿಯ ಸಮಯದಲ್ಲಿ ಸೇವಿಸಬಹುದಾದ ಉತ್ತಮ ತರಕಾರಿಗಳು. ಹಾಲಿನಿಂದ ತಯಾರಿಸಿದ ಆಹಾರಗಳು, ಸಕ್ಕರೆ, ಜೇನುತುಪ್ಪ, ಬೆಲ್ಲ, ಹುಣಸೆಹಣ್ಣು, ಕೋಕಮ್, ತೆಂಗಿನಕಾಯಿ, ಕಲ್ಲಂಗಡಿ ಬೀಜ, ಚಹಾವನ್ನು ವ್ರತದ ವೇಳೆ ಸೇವಿಸಬಹುದು.

**ವ್ರತದ ವೇಳೆ ಈ ಆಹಾರ ಬೇಡ:** ನವರಾತ್ರಿಯ ಸಮಯದಲ್ಲಿ ಈರುಳ್ಳಿ ಹಾಗೂ ಬೆಳ್ಳುಳ್ಳಿ ಸೇವನೆಯನ್ನು ಕಟ್ಟುನಿಟ್ಟಾಗಿ ತಪ್ಪಿಸಿ. ಬೇಳೆ ಕಾಳು ಹಾಗೂ ದ್ವಿದಳ ಧಾನ್ಯಗಳನ್ನು ಬಳಸುವಂತಿಲ್ಲ. ಸಾಮಾನ್ಯ ಉಪ್ಪು, ಅರಿಶಿನ, ಹಿಂಗ್, ಸಾಸಿವೆ, ಮೆಂತ್ಯ ಬೀಜ, ಗರಂ ಮಸಾಲೆ ಹಾಗೂ ಕೊತ್ತಂಬರಿ ಪುಡಿಯಂತಹ ಪದಾರ್ಥಗಳನ್ನು ಅನುಮತಿಸಲಾಗುವುದಿಲ್ಲ. ಈ ಪವಿತ್ರ ದಿನಗಳಲ್ಲಿ ಮದ್ಯ, ಮಾಂಸಾಹಾರ, ಮೊಟ್ಟೆ, ಧೂಮಪಾನ ನಿಷೇಧ.

**ಉಪವಾಸ:** ನವರಾತ್ರಿಯ ಸಮಯದಲ್ಲಿ ಅನೇಕ ಭಕ್ತರು ಎಲ್ಲಾ 9 ದಿನಗಳಲ್ಲಿ ಉಪವಾಸ ಮಾಡುತ್ತಾರೆ. ಆದರೆ ಅಷ್ಟೂ ದಿನ ಉಪವಾಸ ಮಾಡುವುದು ಪ್ರತಿಯೊಬ್ಬರಿಂದ ಸಾಧ್ಯವಿಲ್ಲ. ಇದರ ಬದಲು ಪ್ರತಿ ದಿನ ನಿಮ್ಮ ಕುಟುಂಬದ ಒಬ್ಬ ವ್ಯಕ್ತಿ ಮನೆಯಲ್ಲಿ ಉಪವಾಸ ಇರಲು ಪ್ರಯತ್ನಿಸಬಹುದು.

ಕೆಲವರು ನವರಾತ್ರಿಯ ಮೊದಲ 2 ದಿನ ಹಾಗೂ ಕೊನೆಯ 2 ದಿನ ಉಪವಾಸ ಮಾಡುತ್ತಾರೆ. ಮೊದಲ 2 ದಿನಗಳಲ್ಲಿ ಉಪವಾಸ ಮಾಡಿದ ನಂತರ ಮತ್ತೆ ಆಹಾರ ಸೇವಿಸಿ ನಂತರ ಕೊನೆಯ 2 ದಿನ ಉಪವಾಸ ಮಾಡುತ್ತಾರೆ. ಕೆಲವರ ಪ್ರಕಾರ ನವರಾತ್ರಿಯ ಮೊದಲ ಹಾಗೂ ಕೊನೆಯ 2 ದಿನ ಉಪವಾಸ ಮಾಡುವುದಕ್ಕಿಂತಲೂ ಕೊನೆಯ 2 ದಿನ ಉಪವಾಸ ಮಾಡುವುದು ಉತ್ತಮ ಎಂಬ ನಂಬಿಕೆಯಿದೆ.

ನವರಾತ್ರಿಯಂದು ಉಪವಾಸ ಹಿಡಿಯಲು ಯಾವುದೇ ಸ್ಥಿರ ನಿಯಮವಿಲ್ಲ. ಏಕೆಂದರೆ ಹಬ್ಬದ ಆಚರಣೆ ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತದೆ. ನಿಮ್ಮ ದೇಹ, ಮನಸ್ಸನ್ನು ಸ್ವಚ್ಛವಾಗಿಟ್ಟುಕೊಂಡು, ಆಲೋಚನೆಯನ್ನು ಸದಾ ದೇವಿಯ ಮೇಲೆ ಕೇಂದ್ರೀಕರಿಸಿಕೊಳ್ಳುವ ಮೂಲಕವೂ ದೇವಿಯನ್ನು ಒಲಿಸಿಕೊಳ್ಳಬಹುದು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T